Mr. SPEAKER.—Clause 18. There is an amendment. The Hon'ble Member is not present and therefore his amendment is not moved. The question is :

"That clauses 18 to 29, both inclusive, stand part of the Bill."

The motion was adopted.

Clauses 18 to 29, both inclusive, were added to the Bill.

Mr. SPEAKER.—Schedule II. The question is :

"That Schedule II stand part of the Bill."

The motion was adopted.

Schedule II was added to the Bill.

Mr. SPEAKER.—Clause 1, the Title and the Preamble. The question is :

"That clause 1, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri M. V. RAMA RAO.—I beg to move :

"That the Mysore Small Cause Courts Bill, 1962, as reported by the Joint Select Committee, be passed."

Mr. SPEAKER.—The question is :

"That the Mysore Small Cause Courts Bill, 1962, as reported by the Joint Select Committee, be passed."

The motion was adopted.

MYSORE CATTLE LICENSING BILL, 1963

Motion to consider.

Sri K. PUTTASWAMY (Minister for Municipal Administration).—I beg to move :

"That the Mysore Cattle Licensing Bill, 1963, be taken into consideration."

Mr. SPEAKER.—Motion moved :

"That the Mysore Cattle Licensing Bill, 1963, be taken into consideration."

†Sri K. PUTTASWAMY.—This is a new enabling provision. We are not now seeking to apply this bill to any city or any portion of the city. In certain big towns, cattle housing is posing a problem. Cows and buffaloes are tied in the footpaths and often let loose. The place provided for cattle sheds in certain thickly populated areas is insufficient and overcrowded. It often causes obstruction to the traffic and also it has resulted in unsanitary conditions. In this bill we seek to take power to licence cattle and there is also provision to declare any area in the city as prohibited area. If an area becomes a prohibited area, then a person can have cows and buffaloes for purposes of domestic use and some surplus for selling. He cannot however maintain cows or buffaloes for commercial purposes. That would be the effect of declaring any area as prohibited area. In view of the problem experienced in some thickly populated area in certain cities, it has become very necessary to pass a law of this kind. The Animal Husbandry Wing has also recommended the adoption of such a law. Most of the States have passed such a law and therefore I request the House to pass this Bill.

ಶ್ರೀ ಸಂಜೀವನಾಥ ಐಕಳ (ಸುರತ್‌ಕಲ್).—ಮಾನ್ಯ ಸಭಾಪತಿಗಳೆ, ನಾವು ಈ ಬಿಲ್ಲನ್ನು ಸ್ವಾಗತಿಸುತ್ತೇವೆ. ಆದರೆ ಈ ಮಸೂದೆ ಎಷ್ಟು ವ್ಯಾಪಕವಾಗಿರಬೇಕಾಗಿತ್ತೊ ಅಷ್ಟು ವ್ಯಾಪಕವಾಗಿಲ್ಲ. ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಇವತ್ತಿನ ದಿವಸ ಶಹರುಗಳಲ್ಲಿ ದನ, ಎಮ್ಮೆ, ಎತ್ತು, ಕೋಣಗಳಿಂದ ಎಷ್ಟರಮಟ್ಟಿಗೆ ಅಡ್ಡಿ ಆತಂಕಗಳು ಉಂಟಾಗುತ್ತಿವೆ ಎಂಬುದನ್ನು ನಾವು ಹೇಳ ಬೇಕಾಗಿಲ್ಲ. ಸಣ್ಣ ಶಹರುಗಳಲ್ಲಿ ಹಾಗೂ ದೊಡ್ಡ ಶಹರುಗಳಲ್ಲಿ ಇದು ಒಂದು ದೊಡ್ಡ ಸಮಸ್ಯೆಯಾಗಿ ಎಂತಿದೆ. ಜನಗಳು ದನವನ್ನು ಸಾಕುತ್ತಾರೆ, ಆದರೆ ಅವುಗಳ ಹಾಲನ್ನು ಹಿಂಡಿದನಂತರ ಅವುಗಳನ್ನು ಹಾಗೆಯೆ ಮನೆಗಳಿಂದ ನೇರವಾಗಿ ಹೊರಗೆ ಹೊಡೆದು ಬಿಡುತ್ತಾರೆ. ಇದರಿಂದ ಅನೇಕ ಕಡೆಗಳಲ್ಲಿ ಪಶುಗಳು ವಾಹನ ಸಂಚಾರಕ್ಕೆ ಮಾತ್ರವಲ್ಲ, ಜನ ಸಂಚಾರಕ್ಕೂ ಬಹಳ ಅಡ್ಡಿ ಆತಂಕಗಳನ್ನು ಉಂಟು ಮಾಡುತ್ತಿವೆ. ಮಾರ್ಗಗಳಲ್ಲಿ ಅನೇಕ ಕಡೆಗಳಲ್ಲಿ ಪಶುಗಳು ನಗಣಿ ಹಾಕುವುದರಿಂದ, ಮೂತ್ರ ಮಾಡುವುದರಿಂದ, ಅವುಗಳ ಮೇಲೆ ಕಾಲಟ್ಟ ಜನಗಳು ಜಾರಿ ಬಿದ್ದು ಎಷ್ಟೋ ಕಡೆಗಳಲ್ಲಿ ಆಕ್ಸಿಡೆಂಟುಗಳು ಆಗಿವೆ. ಅದೇ ರೀತಿಯಲ್ಲಿ ಪ್ರಾಣಿಗಳು ಪರಸ್ಪರ ಜಗಳವಾಡಿಕೊಂಡು ಅದರಿಂದ ಜನಗಳಿಗೆ ದುಷ್ಪರಿಣಾಮಗಳಾಗಿರುವ ಉದಾಹರಣೆಗಳನ್ನೂ ಕೊಡಬಹುದು. ಈ ದೃಷ್ಟಿಯಲ್ಲಿ ಮಸೂದೆ ಸ್ವಾಗತಾರ್ಹವಾದುದು. ಇದು ಇಷ್ಟರೊಳಗೇ ಆಗಬೇಕಾಗಿತ್ತು.

ಹೊರ ದೇಶಗಳಿಂದ ಇಲ್ಲಿಗೆ ಬಂದಂಥವರು ಇಂಡಿಯಾ ದೇಶ ಕುರಿತು ಬರೆದ ಪುಸ್ತಕಗಳಲ್ಲಿ ಈ ವಿಷಯವನ್ನು ಉಲ್ಲೇಖಿಸಿದ್ದಾರೆ. ಮುಖ್ಯವಾಗಿ ಈ ಗ್ರಂಥಕಾರರು ಕಲ್ಕತ್ತ ಶಹರಿನಲ್ಲಿ ಮಾರ್ಗ ಗಳಲ್ಲಿ ಉಂಟಾಗತಕ್ಕಂಥ ಅನಾಹುತಗಳ ಬಗ್ಗೆ ವಿಶೇಷವಾಗಿ ಹೇಳಿದ್ದರೂ, ಅವು ಕಲ್ಕತ್ತ ನಗರಕ್ಕೆ ಮಾತ್ರವಲ್ಲ, ದೊಡ್ಡ ಹಶರುಗಳಿಗೆಲ್ಲ ಅನ್ವಯವಾಗುತ್ತದೆ. ಆ ದೃಷ್ಟಿಯಲ್ಲಿಯೂ ಇದನ್ನು ಸ್ವಾಗತಿಸುತ್ತೇವೆ. ಇದರಲ್ಲಿ ಕ್ಲಾಜು 11ರಲ್ಲಿ ರೂಲ್‌ಮೇಕಿಂಗ್ ಪವರ್ ಇಟ್ಟುಕೊಂಡು ಯಾವ ಯಾವ ವಿಷಯಗಳಲ್ಲಿ ರೂಲ್ ಮಾಡಬಹುದು ಎಂಬುದನ್ನೂ ಸೂಚಿಸಿದ್ದಾರೆ, ಆದರೆ ಅಷ್ಟು ವ್ಯಾಪಕವಾಗಿ ಅದು ಇಲ್ಲ. ರೂಲ್ ಮೇಕಿಂಗ್ ಪ್ಯಾವರ್‌ಇನ್ ಹೆಚ್ಚಾಗಿ ಏಕೆ ಇಟ್ಟುಕೊಳ್ಳಬೇಕು ? ಆದಷ್ಟು ಒರಿಜಿನಲ್ ಮಸೂದೆಯಲ್ಲಿಯೆ ಅಳವಡಿಸಿ ಬರೆಯುವುದು ಒಳ್ಳೆಯದಲ್ಲವೆ ಅನ್ನುವುದು ನನ್ನ ಪ್ರಶ್ನೆ. I wish such provisions are avoided.

ಕೆಲವು ಕಡೆಗಳಲ್ಲಿ ಸ್ಥಳಗಳನ್ನು ಪ್ರತ್ಯೇಕಪಡಿಸಲು ಪ್ರೊಹಿಬಿಟೆಡ್ ಏರಿಯ ಎಂಬ ಕ್ಲಾಜನ್ನು ಸೇರಿಸಿದ್ದಾರೆ. ಅದು ಅಗತ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಏಕೆಂದರೆ ಲೈಸೆನ್ಸುಗಳಲ್ಲಿಯೆ ಎರಡು ಕ್ಲಾಜುಗಳಿದೆ. ಕ್ಲಾಜ್ 'ಎ' ಮತ್ತು ಕ್ಲಾಸ್ 'ಬಿ' ಲೈಸೆನ್ಸುಗಳ ಉದ್ದೇಶ ಹೇಳಿದೆ. ಕಾಜ್ 'ಬಿ' ಲೈಸೆನ್ಸು ಕೊಡುವುದು ಹಾಲು ವ್ಯಾಪಾರ ಮಾಡುವವರಿಗೆ.

Sri K. PUTTASWAMY.—'B' class licences, will not be issued in prohibited areas.

Mr. SPEAKER.—'A' class licences will be permitted for a small family subject to certain conditions of cleanliness, etc.

Sri SANJEEVANATH AIKALA.—'A' class licence itself would have been sufficient. There is no need for 'B' class licences. That is a matter to be considered. ಮತ್ತೊಂದು ವಿಷಯವೇನೆಂದರೆ "ಎ" ಕ್ಲಾಸು, "ಬಿ" ಕ್ಲಾಸು ಎಂದು ಈ ರೀತಿ ಮಾಡುವುದಕ್ಕಿಂತ ಒಂದೇ ಲೈಸೆನ್ಸು ಕೊಡಬಹುದು. ಪ್ರತ್ಯೇಕ ಬ್ಯಾಡ್ಜು ತಗೆದುಕೊಳ್ಳು ತ್ತಾರೆ. ಪ್ರಾಣಿಗಳಿಗೆ ಒಂದು ಸ್ಟ್ಯಾಂಪು ಹಾಕಿದರೂ ಆಯಿತು. ಈ ಬಾಬನ್ನು ಲೋಕಲ್ ಬಾಡಿ ಗಳಿಗೆ ಕೊಟ್ಟರೆ ಅದರಿಂದ ಅವರಿಗೆ ಹೆಚ್ಚು ಉತ್ಪಾದನೆಯೂ ಬರಬಹುದು. ಆದ್ದರಿಂದ ಲೈಸೆನ್ಸಿಂಗ್ ಈ ರೀತಿ ಮಾಡುವುದಕ್ಕಿಂತ ಪ್ರಾಣಿಗಳ ಮೇಲೆಯೇ ಒಂದು ಸೀಲು ಒತ್ತುವ ಏರ್ಪಾಡು ಮಾಡಿ.

ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ.

3-30 P.M.

Sri K. S. SURYANARAYANA RAO (Mysore).—Sir, I would like to lend my support to the Bill and in so doing, I would like to offer a new suggestions for the consideration of the Government.

The main object of the Bill as mentioned in the Statement of Objects and Reasons is that the cows crowd in the urban areas along with human beings and thereby not only cause inconvenience, but also bring about insanitary conditions; and therefore this Bill is sought to be introduced to regulate their maintenance in particular localities in a particular way; and also regulate their movement on roads and streets etc. This Act seems to empower the State Government to act independently in this behalf. My only suggestion to the Government is, the object of the Bill is very laudable and very good. It should be done. But the procedure contemplated in this Bill needs scrutiny at the hands of the Government. I suggest that the Government may think over it. My object is this: these are days of democratic decentralisation and in doing so, it is in the interest of the State to see that the last unit functions independently as far as possible without relying on the Centre or the State Government in matters of administration of the local area. When this philosophy is accepted and when we want to usher into the social life, I believe this Bill runs counter that. Therefore, this Bill needs a little more consideration at the hands of the Government. Why I say this is this: The object with which we want to implement and the reasons for which we want to bring up this legislation can very well be done through the existing machinery of the local self-government, itself. Sir, there are the Corporations, Municipalities in the urban area. Municipalities may be big or small. Still, they are called municipalities. There are the local people so far as the civic amenities of the people are concerned. When we charge the local people to run the civic administration, it is their primary responsibility to see that sanitary conditions are kept up in the locality which may not affect the health and convenience of the public. Therefore, it would serve the best interests of everybody if the local unit or local authority or local body is asked or empowered to do it within the frame-work of the Corporation Act or the

Municipalities Act or the Panchayets Acts, if it should go to the Panchayet level. This question of exercising power in this respect from the Centre is not a healthy trend at any rate. Because by this Act, there will have to be one more statute added to the statute book. Instead of crowding the statute book with numerous legislations, what I would suggest is, the tendency or the impression that is created in the minds of the public is that there are numerous legislations in the country and it becomes very difficult for the ordinary man or the common man to know what are the laws that are being administered in the country. Therefore, it would be in the best interests of the citizen if there are few laws and better and effective control over it. Therefore, it would be best if you give powers to the Corporation or the Local body and have for yourself the right to interfere if they fail to function properly. That is perfectly correct. But instead of doing that and delegating these powers to the local authority, the administration is something like having two Acts for the same purpose in addition to putting power in the hands of the same authority, would it not be better to incorporate these provisions in an Act. Therefore Sir, I only wish. Government gives better thought to it at any stage.

Another point I would like to mention is, so far as licencing is concerned, this will hit rather hard even persons owning one good cow. Now-a-days, the idea is to have a better yielding cow. When we have better yielding cows, naturally the yield will be much more than six litres after personal consumption. Therefore, if it is found very necessary to have it, let there be a little more liberalising in the matter of licencing. Because 6 litres would be too inadequate for consumption. It would be possible to have a gallon and a half. Now-a-days, ordinary cross-bred cows yield more than a gallon. Many times, they milk three times per day.

Sri K. PUTTASWAMY.—When we want private people to maintain cows, we want them to consume more milk.

Sri K. S. SURYANARAYANA RAO.—I personally would be happy because the average consumption of milk *per capita* would be increased. But his means would be such as would compel him to sell a portion of the milk that he produces either to meet the cost of maintanance of the cows or to dispose of the surplus. Therefore, I would like to request the Government to consider to increase the minimum that they have fixed. Therefore Sir, I would request the Government to liberalise the conditions of licences and incorporate these provisions or delegate the power to local bodies to implement the provisions of this Bill.

Mr. SPEAKER.—He may please see clause 14, how many statutes will have to be amended.

Sri K. S. SURYANARAYANA RAO.—I quite agree with the Chair. But we are enacting uniform laws. Naturally all these Acts will get repealed.

Mr. SPEAKER.—It is not the usual repeal.

Sri K. S. SURYANARAYANA RAO.—One point is that, we are enacting a uniform municipal administration. Possibly 50 per cent of the repealing Acts over-riding section 14 would come under this Act. The number of laws that would be affected would be very much less when we enact uniform laws. That apart, I would suggest, leave the administration of this power to the local authority, because it is they who will understand the local problem. So it is better even now the Government sitting at the Centre who may have the over-all interest of the State and not the particular interest of the particular locality.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ನಮ್ಮ ಮುಂದೆ ಇರತಕ್ಕ ಈ ಮಸೂದೆಯನ್ನು ನಾನು ಬಹಳ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈಗ ತಾನೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಸೂರ್ಯನಾರಾಯಣರಾಯರು ಹೇಳಿದಹಾಗೆ ಸರ್ಕಾರ ಈ ರೀತಿಯ ಮಸೂದೆಯನ್ನು ತರುವುದಕ್ಕೆ ಬದಲಾಗಿ ಆಯಾ ವಿಧಿಸಿಪಾಲಿಟಿಗಳಿಗೆ ಮತ್ತು ಕಾರ್ಪೊರೇಷನ್ನುಗಳಿಗೆ ಅಧಿಕಾರವನ್ನು ಕೊಟ್ಟರೆ ಚೆನ್ನಾಗಿರುತ್ತದೆ ಎಂದು. ಹಾಗೆ ಮಾಡಿದರೆ ಇನ್ನೂ ಹೊಲಸಾಗುತ್ತದೆ ಎಂದು ನನಗನ್ನಿಸುತ್ತದೆ. ಏಕೆಂದರೆ ಸದಸ್ಯರು ಚುನಾಯಿತರಾಗಿ ಬರಬೇಕಾದಾಗ ಅವರವರ ವಾರ್ಡ್‌ಗಳಲ್ಲಿ ಅಥವಾ ಪೊಹಲ್ಲಾಗಳಲ್ಲಿ ಇರತಕ್ಕ ಜನಗಳಿಗೆ ಕಠಿಣವಾಗಿ ಹೇಳತಕ್ಕ ಒಂದು ಅವಕಾಶ ಅವರಿಗೆ ಸಾಧ್ಯವಾಗುವುದಿಲ್ಲ. ಅದುದರಿಂದ ಅವರಿಗೆ ಅದಷ್ಟು ಹೆಚ್ಚು ಅವಕಾಶಗಳನ್ನು ಕೊಡಬಾರದು. ಮಾನ್ಯ ಸದಸ್ಯರಾದ ಸೂರ್ಯನಾರಾಯಣರಾಯರ ಮನೆ ಮೈಸೂರಿನಲ್ಲಿದೆ. ಅವರ ಮನೆ ಇರುವ ಬೀದಿಗೆ ನೂರಡಿ ರಸ್ತೆ ಎಂದು ಹೆಸರು. ಅಲ್ಲಿ ಬರೀ ದನಗಳೇ ಇರುತ್ತವೆ. ಇದನ್ನು ನೋಡುತ್ತ ನೋಡುತ್ತಾ ಮುನಿಸಿಪಾಲಿಟಿಗಳಿಗೆ ಅಧಿಕಾರವನ್ನು ಕೊಡಿ ಎಂಬುದಾಗಿ ಅವರು ಹೇಗೆ ಹೇಳ ತ್ತಾರೋ ನನಗೆ ಅರ್ಥವಾಗುವುದಿಲ್ಲ.

ಆದ್ದರಿಂದ ಸರ್ಕಾರದವರು ನೇರವಾಗಿ ಒಂದು ಕಾನೂನನ್ನು ಮಾಡಿ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳು ಸಾಧ್ಯವಾದರೆ ದೊಡ್ಡ ದೊಡ್ಡ ಪಂಚಾಯ್ತಿ ಇರತಕ್ಕ ಪ್ರದೇಶಗಳನ್ನೂ ಕೂಡ ಒಳಗೊಂಡಂತೆ ಈ ಆಕ್ಟ್‌ನ್ನು ಜಾರಿಗೆ ತರುವುದು ಬಹಳ ಸ್ವಾಗತಾರ್ಹವಾದುದು ಎಂದು ಅನಿಸುತ್ತದೆ. ಮೈಸೂರು ನಗರದಲ್ಲಿ ಹಿಂದೆ ಈ ದನಗಳನ್ನು ಸಾಕುವವರಿಗೆ ನಗರದ ಹೊರಭಾಗದಲ್ಲಿ ಬೇರೆ ಒಂದು ಕಾಲೋನಿಯನ್ನು ಕಟ್ಟಿ ಅಲ್ಲಿ ಬೇಕಾಗತಕ್ಕ ಎಲ್ಲಾ ಸೌಕರ್ಯಗಳನ್ನೂ ಒದಗಿಸಿ ಒಂದು ಕಟ್ಟುಪಾಡು ಮಾಡಿದ ಒಂದು ಸ್ಥಿತಿ ಇತ್ತು ಎಂದು ಕಾಣುತ್ತದೆ. 'ಗೋಕುಲ' ಎಂಬ ಒಂದು ಎಕ್ಸ್‌ಟೆನ್ಷನ್ ಕೂಡ ಮಾಡಿದ್ದರು. ಆದರೆ ಅದು ಬಹಳ ಮಟ್ಟಿಗೆ ಸಾರ್ಥಕವಾಗಲಿಲ್ಲ. ಆದ್ದರಿಂದ ಪುಂಡು ದನ, ಪೋಲಿ ದನಗಳ ಹಾವಳಿ ಏನಿದೆ ಇದನ್ನು ತಪ್ಪಿಸಬೇಕಾದ್ದು ಬಹಳ ಅಗತ್ಯ, ಈ ದನಗಳ ಕಾಟದಿಂದ ಇಟ್ಟಂಥ ಬೆಳೆ ಸಕಾಲಕ್ಕೆ ಕೈ ಹತ್ತುವುದಿಲ್ಲ ವಷ್ಟು ಜನರಿಗೂ ಕೂಡ ಇವುಗಳಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ನಗರದ ಹೊರವಲಯದಲ್ಲಿ ಇವುಗಳಿಗೆ ಒಂದು ಏರ್ಪಾಡು ಮಾಡಬೇಕೆಂದು ಶ್ರೀಮಾನ್ ರಂಗೇಗೌಡರು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದು ಸೂಕ್ತವಾಗಿದೆ ಎಂದು ಕಾಣುತ್ತದೆ. ಅಯಾಯಾ ಹಳ್ಳಿಯವರು ಈ ದನಗಳನ್ನು ಪಡದಿರತಕ್ಕವರು ಯಾರಿದ್ದಾರೆ ಅವರಿಗೆ ಆ ಹಳ್ಳಿಯ ಹೊರಗಡೆ ಸುಲಭದರದಲ್ಲಿ ಮನೆಗಳನ್ನು ಕಟ್ಟಿಕೊಟ್ಟು ಅವನ್ನು ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡುವುದು ಸೂಕ್ತ ಎಂದು ಹೇಳಿ ಈ ಬಿಲ್ಲನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ಏನು ಮಾಡುವುದು! ನಮ್ಮ ರಾಜ್ಯ ಸರ್ಕಾರದವರು ದಿನ ಬೆಳಗಾದರೆ ತರತಕ್ಕ ಈ ಮಸೂದೆಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇವತ್ತು ದನ ಸಾಕುವುದಕ್ಕೆ ಲೈಸೆನ್ಸ್, ನಾಳೆ ಕೋಳಿಸಾಕುವುದಕ್ಕೆ ಲೈಸೆನ್ಸ್, ಜೋಪಿಹಾಕುವುದಕ್ಕೆ ಲೈಸೆನ್ಸ್, ಕೋಟು ಹಾಕುವುದಕ್ಕೆ ಲೈಸೆನ್ಸ್, ಪೈಜಾಮಾ ಹಾಕಿಕೊಳ್ಳುವುದಕ್ಕೆ ಲೈಸೆನ್ಸ್, ಸೀರೆ ಉಟ್ಟುಕೊಳ್ಳುವುದಕ್ಕೆ ಲೈಸೆನ್ಸ್, ರವಕೆ ತೊಟ್ಟುಕೊಳ್ಳುವುದಕ್ಕೆ ಲೈಸೆನ್ಸ್, ಜಾಕೆಟ್ ಹಾಕಿಕೊಳ್ಳುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತೀರಿ. ಇದನ್ನೆಲ್ಲಾ ನೋಡಿ ಸ್ವಾಮಿ; ನೀವು ಯಾವ ಧಾಟಿಯಲ್ಲಿ ಹೋಗುತ್ತಾ ಇದ್ದೀರಿ, ಏತಕ್ಕೆ ಈ ಲೈಸೆನ್ಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೀರಿ ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಇದರಿಂದ ಎಷ್ಟು ಆದಾಯ ಇದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡುವುದಿಲ್ಲ. ಪುಂಡು ದನಗಳನ್ನು ಒಂದುಕಡೆ ಸೇರಿಸಿ ಅವುಗಳ ಹಾವಳಿಯನ್ನು ತಪ್ಪಿಸಿ ಅದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಹಾಲು ಕರೆಯುವ ದನ, ಎಮ್ಮೆಗಳಿಗೆ ಲೈಸೆನ್ಸ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಹೊತ್ತಿರಿ ಇದನ್ನು ಎಲ್ಲಿಗೆ ಮುಗಿಸುತ್ತೀರಾ? ನಿಮಗೆ ಕೆಲಸ ಮಾಡುವುದಕ್ಕೆ ಪುರುಸತ್ತೇ ಇಲ್ಲ. ಎಂದು ಹೇಳುತ್ತೀರಿ ಇದಕ್ಕಿಂತ

ಮಹತ್ವದ ಮಸೂದೆಯನ್ನು ಚರ್ಚೆಗಾಗಿರುವಾಗ ಇದನ್ನು ಚರ್ಚಿಸಲಿಕ್ಕೆ ನಮಗೆ ಪುರಸೊತ್ತು ಎಲ್ಲಿಂದ ಬಂತು ?

MR SPEAKER.—He should kindly refer to the Bill.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಿಲ್ಲಿನಿಂದ ಆಗಿರತಕ್ಕ ಅಥವಾ ಆಗತಕ್ಕ ಅನುಕೂಲಗಳು, ಅನಾನುಕೂಲಗಳನ್ನು ತಾವು ವಿವರವಾಗಿ ಹೇಳಲೇ ಇಲ್ಲ. ಒಂದುಕಡೆ ಶ್ರೀ ಖಾನ್ ಕೃಷ್ಣ ಪ್ಪನವರು ನಾನು ಪಾಶ್ಚಾತ್ಯ ದೇಶಗಳನ್ನೆಲ್ಲಾ ಸುತ್ತಿಕೊಂಡು ಬಂದಿದ್ದೇನೆ; ಒಂದೊಂದು ಎಮ್ಮೆ ಒಂದೊಂದು ಹಸು ಅಲ್ಲಿ ಇಪ್ಪತ್ತು ಸೇರು ಹಾಲು ಕರೆಯುತ್ತದೆ. ಅಂತಹ ಹಸು ಎಮ್ಮೆಗಳನ್ನು ನೀವೂ ಸಹ ಕಟ್ಟಬೇಕು ಎಂದು ಹೇಳುತ್ತಾರೆ. ಇದನ್ನೆಲ್ಲಾ ಏಕೆ ಹೇಳುತ್ತೀನೆ ಎಂದರೆ ಒಂದು ಕಡೆ ಹಸು ಸಾಕಿರಿ, ಕರು ಸಾಕಿರಿ, ಕೋಳಿ ಸಾಕಿರಿ, ಕುರಿ ಸಾಕಿರಿ ಎನ್ನುತ್ತೀರಿ, ಇನ್ನೊಂದುಕಡೆ ಆ ರೀತಿ ಸಾಕುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಿ ಎನ್ನುತ್ತೀರಿ, ಇದು ಒಂದಕ್ಕೊಂದಕ್ಕೆ ಕಾನ್‌ಫ್ಲಿಕ್ಟ್ ಆಗುತ್ತದೆ. ಇದನ್ನೆಲ್ಲಾ ನೋಡಿದರೆ ದನ ಸಾಕುವುದೂಬೇಡ, ಕೋಳಿ ಸಾಕುವುದೂಬೇಡ, ಕುರಿ ಸಾಕುವುದೂ ಬೇಡ ಎನ್ನಿಸುತ್ತದೆ. ಕಾನೂನಿಗೆ ವ್ಯತಿರಿಕ್ತವಾಗಿ ಹೊದರೆ ಸಾವಿರ ರೂಪಾಯಿ ಜುರ್ಮಾನೆ ಹಾಕುತ್ತೀರಿ. ಇದರಿಂದ ಏನಾಗುತ್ತದೆ ಎಂದರೆ ಜನರು ನೇಮಹರಿಗಳಾಗುತ್ತಾರೆ. ಕೇಂದ್ರ ಸರ್ಕಾರದವರು ಬಹಳ ದಿವಸಗಳ ಕೆಳಗೇ ಹೇಳಿದ್ದರು ಇಂತಹ ಒಂದು ಕಾನೂನನ್ನು ಈ ಹಿಂದಯೇ ಮಾಡಬೇಕಾಗಿತ್ತು ಎಂದು ಹೇಳುತ್ತಾ ಇದ್ದೀರಿ, ಇಂತಹ ಒಂದು ಕಾನೂನನ್ನು ಇಷ್ಟು ಅತಿಶೀಘ್ರವಾಗಿ ಮಾಡಬೇಕಾದ ಪ್ರಮೇಯ ಏನಿತ್ತು ? ದನಗಳ ಸಂಪತ್ತು ಕಡಿಮೆಯಾಗುತ್ತಿದೆ, ಕೋಳಿ ಸಾಕಾಣಿಕೆ ಕಡಿಮೆಯಾಗುತ್ತಿದೆ. ಕುರಿ ಸಾಕಾಣಿಕೆ ಕಡಿಮೆಯಾಗುತ್ತಿದೆ ಎಂತಲೇ! ಈ ದನಗಳನ್ನು ಹೇಟೆಗಳಲ್ಲಿ ಎಲ್ಲೂ ಸಾಕುತ್ತಾ ಇಲ್ಲ. ಇದನ್ನು ಮಾಡುತ್ತಾ ಇರುವುದು ಹಳ್ಳಿಗಳನ್ನು ಉಳಿಸುವುದಕ್ಕೆ ಎಂದು ಹೇಳಿ ಒಪ್ಪಿಕೊಂಡರೂ ಕೂಡ ಇವತ್ತಿನ ದಿವಸ ಬೇಸಾಯ ಮಾಡುವುದಕ್ಕೆ ಹಳ್ಳಿಗಳಲ್ಲಿ ಎತ್ತುಗಳು ಸಿಕ್ಕುತ್ತಾ ಇಲ್ಲಾ, ಹೊಗಲು ಕೋಣಗಳನ್ನು ಕಟ್ಟಿ ಉಳುವೆ ಮಾಡೋಣ ಎಂದರೆ ಕೋಣಗಳೂ ಸಹ ಸಿಕ್ಕುತ್ತಾ ಇಲ್ಲ. ಹೀಗಿರುವಾಗ ಈ ದನಗಳನ್ನು ಇಟ್ಟುಕೊಳ್ಳಬೇಕಾದರೆ ಅವುಗಳನ್ನು ಸಾಕಬೇಕಾದರೆ ಲೈಸೆನ್ಸ್ ತೆಗೆದುಕೋಳ್ಳಬೇಕೆನ್ನುತ್ತೀರಲ್ಲಾ ಇದು ಸರಿಯೇ ಎಂಬುದನ್ನು ತಾವು ಯೋಚನೆಮಾಡಬೇಡವೇ! ಇದು ಎಲ್ಲಾದರೂ ಸಾಧ್ಯವೇ ಎಂದು ತಮ್ಮನ್ನು ಕೇಳುತ್ತಾ ಇದ್ದೇನೆ? ಅಗ್ರಿಕಲ್ಚರಲ್ ಇಲಾಖೆ, ಅನಿಮಲ್ ಹಸ್ಬೆಂಡರಿ ಇಲಾಖೆಯವರು ಎಷ್ಟು ಹೋರಿರುಗಳನ್ನು ದನಗಳನ್ನು ಸಾಕುತ್ತಾ ಇದ್ದಾರೆ ಎಂಬುದನ್ನು ಅವರು ಒಂದುಕಡೆ ಭಾಷಣ ಮಾಡುತ್ತಾ ಹೇಳಿದ್ದಾರೆ. ತಾವು ಹೇಳತಕ್ಕ ಪರಿಯಲ್ಲಿ ಯಾರಾದರೂ ದನಗಳನ್ನು ಕಟ್ಟಿಕೊಂಡಿದ್ದರೆ ಅವನ್ನು ಸರ್ಕಾರದವರು ಅವರ ಮನಸ್ಸಿಗೆ ಬಂದಾಗ ಆರುತಿಂಗಳ ಒಳಗೆ ಆ ದನಕರು, ಕೋಳಿ, ಕುರಿ ಎಲ್ಲವನ್ನೂ ಕಟ್ಟಿಕೊಂಡು ಅಲ್ಲಿಂದ ಹೊರಟು ಹೋಗಬೇಕೆಂದರೆ ಅವರು ಎಲ್ಲಿಗೆ ಹೋಗಬೇಕು! ಚನ್ನಪಟ್ಟಣ, ರಾಘವನಗರ ಇಂತಹ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ಭೂಮಿ ವ್ಯವಸಾಯ ಮಾಡತಕ್ಕ ರೈತ ಆ ಊರಿನಲ್ಲಿ ವಾಸ ಮಾಡುತ್ತಾನೆ. ಅವನು ತನ್ನ ದನಗಳಿಗೆ, ಕೋಳಿಗಳಿಗೆ, ಕುರಿಗಳಿಗೆ, ಎಮ್ಮೆಗಳಿಗೆ, ಕೋಣಗಳಿಗೆ ಎಲ್ಲ ವಾಸಸ್ಥಾನಮಾಡಬೇಕು! ಇದನ್ನೆಲ್ಲಾ ಎಲ್ಲಿ ಕಟ್ಟಬೇಕು ಎಂದು ಹೇಳುತ್ತೀರಿ! ನಿವೇನೋ ಪ್ರೊಹಿಬಿಟೆಡ್ ಏರಿಯಾ ಎಂದು ಹೇಳುತ್ತೀರಿ, ಇನ್‌ಸ್ಪೆಕ್ಷನ್‌ಗೆ ಅದು ಮಾತ್ರಸ್ಥಾನ ಎಂದು ಹೇಳಿ ಅವುಗಳನ್ನು ಆಚೆಗೆ ಕಟ್ಟಿ ಎಂದು ಹೇಳುತ್ತೀರಿ; ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಇವತ್ತಿನ ದಿವಸ ಎರಡು ವರ್ಷಗಳು ಕಳೆದರೂ ಕೂಡ ಇವತ್ತಿನ ಪರ್ ಕ್ಯಾಪಿಟಾ ಇನ್‌ಕಂ ಎಷ್ಟು ಮಟ್ಟದಲ್ಲಿ ಇರಬೇಕಾಗಿತ್ತೋ ಆ ಮಟ್ಟದಲ್ಲಿ ಇಲ್ಲದೇ ಇರುವಾಗ ಮತ್ತು ಜನರು ವಾಸಮಾಡುವುದಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇಲ್ಲದ್ದೇಇರುವಾಗ ಅವರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸುವುದಕ್ಕೆ ಅವರಿಗೆ ಶಕ್ತಿ ಇಲ್ಲದೇ ಇರುವಾಗ, ಯೋಗ್ಯತೆ ಇಲ್ಲದೇ ಇರುವಾಗ ದನಗಳನ್ನು ಕಟ್ಟುವುದಕ್ಕೆ ಫಾರಂಹೌಸ್‌ಗಳನ್ನು ನಿರ್ಮಾಣಮಾಡಿ ಎಂದರೆ ಅದು ಸರಿಯೇ ಎಂದು ತಮ್ಮನ್ನು ಕೇಳಬೇಕಾಗಿದೆ. ಹಳ್ಳಿಗಾಡಿನಲ್ಲಿರತಕ್ಕ ಜನ, ಪೇಟೆಯಲ್ಲಿ ವಾಸಮಾಡತಕ್ಕ ಜನ ತಮ್ಮಲ್ಲಿರತಕ್ಕ ದನ ಕೋಳಿ ಕುರಿಗಳನ್ನು ಸಾಕುವುದಕ್ಕೆ ಎಷ್ಟು ಜಾಗಬೇಕೋ ಅಷ್ಟು ಜಾಗ ಇಲ್ಲದೇ ಅವುಗಳನ್ನು ತಮ್ಮ ಗುಡಿಸಲುಗಳ ಪಕ್ಕದಲ್ಲಿ ಕಟ್ಟಿಕೊಂಡಿರುತ್ತಾರೆ. ಅವರು ವಾಸಮಾಡುವ ಮನೆಯೆಲ್ಲೇ ಎಮ್ಮೆ ಹಸು ಕರುಗಳನ್ನು ಕಟ್ಟಿಕೊಂಡಿರುತ್ತಾರೆ. ಅದನ್ನು ನೀವು ಪ್ರೊಹಿಬಿಟ್ ಮಾಡಿದ್ದೇ ಆದರೆ ಅವರು ಅವುಗಳನ್ನು ಎಲ್ಲಿ ಕಟ್ಟಿಕೊಳ್ಳಬೇಕು! ಇದರಿಂದ ಅವರಿಗೆ ಎಷ್ಟು ಅನಾಹುತಗಳಾಗುತ್ತವೆ ಎಂಬುದನ್ನು ತಾವು ಯೋಚನೆಮಾಡಬೇಡವೇ! ಊರಿನಿಂದ ಬಹಳ ದೂರಪ್ರದೇಶಕ್ಕೆ ಅವರು ದನಕರುಗಳನ್ನು ಬಿಟ್ಟಬೇಕಾದರೆ ಎಷ್ಟು ತೊಂದರೆಯಾಗುತ್ತದೆ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಈಗ ಬೆಂಗಳೂರಿನ ಉತ್ತರಭಾಗ, ವಾಯವ್ಯಭಾಗ, ದಕ್ಷಿಣ ಭಾಗದಲ್ಲಿ ಎಲ್ಲಿಗೆ ಹೋದರೂ ಕೂಡ ಹತ್ತು ಮೈಲಿಗಳಿಗಿಂತಲೂ ಕೂಡ ಹೆಚ್ಚುದೂರ ಹೊಗಬೇಕಾಗುತ್ತದೆ, ಕಾರ್ಪೊರೇಷನ್‌ನವರು ಸರ್ಕಾರದವರ ಅನುಮತಿಯಿಂದ ಇದರ ಲಿಮಿಟ್ಸನ್ನು ಬೇಕಾದರೆ ಇನ್ನೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಕ್ಸ್‌ಟೆಂಡ್ ಮಾಡಬಹುದು. ಅಂತಹ ಸಂದರ್ಭದಲ್ಲಿ ಇಲ್ಲಿರತಕ್ಕ ಜನಗಳು ದನಗಳು, ಕುರಿ, ಕೋಳಿ ಇವುಗಳನ್ನೆಲ್ಲಾ ಅವರು ಎಲ್ಲಿ ಕಟ್ಟಬೇಕು? ಇಂತಹ ಕಾನೂನನ್ನು ಯಾರು ನಿಮಗೆ ಮಾಡು ಎಂದು ಹೇಳುತ್ತಾರೋ ನನಗೆ ಗೊತ್ತಾಗುವುದಿಲ್ಲ. ಹಿಂದೆ ಮುಂದು ಇಲ್ಲದಮೇರೆ ಸ್ವಲ್ಪ ಕಾದು ನೋಡಿ ಪರಿಸ್ಥಿತಿ ಎಲ್ಲಾ ಚೆನ್ನಾಗಿ ಆದಮೇರೆ ಇಂಥ ಕಾನೂನುಗಳನ್ನು ತಂದರೂ ಪರವಾಗಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ನಿಮ್ಮ ಬೆನ್ನು ಮೂಳೆ ಭದ್ರವಾಗಿ ನೇರವಾದಮೇಲೆ ಇದನ್ನು ಮಾಡಬೇಕೇ ಹೊರತು ಇರತಕ್ಕ ಸ್ಥಳವನ್ನು ಬಿಟ್ಟು ಹೊರಟುಹೋಗಿ ಎಂದರೆ ಅದು ಸಾಧ್ಯವಾಗುವುದಿಲ್ಲ. ಕೊಡಗಿಗೆ ಹೋಗಿ, ಸೌತ್ ಕನರಾಕ್ಕೆ ಹೋಗಿ ಒಂದೊಂದು ಕಡೆ ಒಂದೊಂದು ಹಳ್ಳಿ ಇರುತ್ತದೆ. ಈಗ ಬ್ರಹ್ಮಾವರ ಇದೆ, ಅದನ್ನು ಮುನಿಸಿಪಾಲಿಟಿ ಎಂದು ಡಿಕ್ಲೇರ್ ಮಾಡಿ ಅಲ್ಲಿರತಕ್ಕ ದನ ಕುರಿ ಕೋಳಿ ಎಲ್ಲವನ್ನು ಬೇರೆ ಕಡೆ ಹೊಡೆದುಕೊಂಡು ಹೋಗಿ ಎಂದರೆ ಅವಕ್ಕೆ ಆ ಜನ ಒಪ್ಪುತ್ತಾರೆಯೇ? ನೀವು ಏನು ಮಾಡುತ್ತಾ ಇದ್ದೀರಿ? ನಿಮ್ಮ ಉದ್ದೇಶ ಏನು? ದನಕರುಗಳನ್ನು ಕಟ್ಟತಕ್ಕ ಮನುಷ್ಯ ಲೈಸೆನ್ಸ್ ತಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಹೊರಟಿದ್ದೀರಲ್ಲಾ. ಅವನು ಎಂದಾದರೂ ಹಾಲು ಕರೆದು ಆರು ಲೀಟರ್‌ಗಿಂತ ಹೆಚ್ಚು ಹಾಲು ಮಾರಿದ್ದಾನೆಯೇ? ನಮ್ಮಲ್ಲಿ ಒಂದು ಹಸುವನ್ನು ಚೆನ್ನಾಗಿ ಮೇಯಿಸಿದರೆ 6 ಲೀಟರ್ ಕೊಡುವ ಹಸು 8 ಲೀಟರ್ ಕೊಟ್ಟೀತು. 2 ಲೀಟರ್ ಹಾಲನ್ನು ತೆಗೆದುಕೊಂಡು ಕಲಗಚ್ಚಿನಲ್ಲಿ ಚೆಲ್ಲಬೇಕೋ? ಸರ್ಕಾರದವರ ಈ ವಿಚಿತ್ರ ರೀತಿಯ ಕರಡು ಮಸೂದೆಯನ್ನು ನೋಡಿ ನನಗೆ ಮನಸ್ಸಿಗೆ ತುಂಬಾ ವ್ಯಥೆ ಉಂಟಾಗಿದೆ.

ಇಲ್ಲಿ ಲೈಸೆನ್ಸ್ ವಿಚಾರ ಬೇರೆ ಹೇಳಿದ್ದಾರೆ. ಆದರೆ ಈ ಲೈಸೆನ್ಸ್ ಕೊಡತಕ್ಕ ವ್ಯಕ್ತಿ ಯಾರೆಂಬುದನ್ನು ಇಲ್ಲಿ ತಿಳಿಸಿಲ್ಲ. ಈ ಲೈಸೆನ್ಸ್‌ನ್ನು ಆತ ಎಷ್ಟು ದಿನದಲ್ಲಿ ಕೊಡಬೇಕು ಎಂಬ ಒಂದು ಅಂಶವನ್ನೂ ಇಲ್ಲಿ ತಿಳಿಸಿಲ್ಲ. ಪ್ರತಿಯೊಂದಕ್ಕೂ ರೂಲ್ಸಿನಲ್ಲಿ ಪ್ರಿಸ್‌ಕ್ರೈಬ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ 'ಮೂಗಿಗಿಂತ ಮೂಗುತಿ ಭಾರ' ಎನ್ನುವಂತಿದೆ. ಮುಖ್ಯವಾಗಿ ಲೈಸೆನ್ಸ್ ಫೀ ಇಷ್ಟು ಕೊಡಬೇಕು ಎಂಬುದನ್ನು ಇಲ್ಲಿ ತಿಳಿಸುವುದು ಬೇಡವೇ? ಇಲ್ಲಿ ಇವರು ಏನು ಹೇಳಿದ್ದಾರೆಂದರೆ: ಪ್ರತಿಯೊಂದನ್ನೂ ರೂಲ್ಸಿನಲ್ಲಿ ಪ್ರೊವೈಡ್ ಮಾಡುತ್ತೇವೆ ಎಂದು. ನನ್ನ ಈ ಏಳು ವರ್ಷದ ಅನುಭವದಲ್ಲಿ ಹೀಗೆ ಎಲ್ಲವನ್ನೂ ರೂಲ್ಸಿನಲ್ಲಿ ಪ್ರೊವೈಡ್ ಮಾಡಿದ್ದನ್ನು ಎಂದೂ ನಾನು ನೋಡಿಲ್ಲ. ಒಂದು ವೇಳೆ ನಾವು ರೂಲ್ಸನ್ನು ಮಾಡಿದಮೇಲೆ ಅವು ತಿದ್ದುಪಡಿಯಾದ ದಿನವನ್ನೇ ನಾನು ಎಂದೂ ನೋಡಲಿಲ್ಲ. ಈ ವಿಚಾರದಲ್ಲಿ ಸರ್ಕಾರದವರು ರಚಿಸಿರತಕ್ಕ ಆ ಸಬಾರ್ಡಿನೇಟ್ ರೆಜಿಸ್ಲೇಷನ್ ಕಮಿಟೀ ಸಹಾ ಇಂಥ ಕಾನೂನುಗಳನ್ನು ತಿದ್ದಿ ಸರಿಪಡಿಸಿದ ದಿನವನ್ನು ನಾನು ನೋಡಲಿಲ್ಲ.

Mr. SPEAKER.—The Committee is functioning and the Hon'ble Member is aware of it and the report is a very useful one. In these circumstances he cannot say like this.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ನಾನು ಮುಂದೆ ಇನ್ನೂ ಏನು ಹೇಳುತ್ತೇನೆಂಬುದನ್ನು ಕಾದು ನೋಡಿ. ಈಗಿರತಕ್ಕ ಸಬಾರ್ಡಿನೇಟ್ ರೆಜಿಸ್ಲೇಷನ್ ಕಮಿಟಿಗೆ ಇರತಕ್ಕ ಕಾನೂನುಗಳನ್ನೇ ವಿಮರ್ಶೆ ಮಾಡುವುದಕ್ಕೆ ಆಗಿಲ್ಲ. ಹಾಗಿರುವಾಗ ಸರ್ಕಾರದವರು ಹೀಗೆ ದಿನಕ್ಕೊಂದು ಶಾಸನವನ್ನು ಮಾಡಿ ಅದನ್ನು ಶಾಸನ ಕಡಿತಕ್ಕೆ ರೀಸುತ್ತಾ ಹೋದರೆ ಆ ಕಮಿಟಿಯವರಿಗೆ ನೋಡುವುದಕ್ಕೆ ಅವಕಾಶ ವೆಲ್ಲಿದೆ? ಮೇಲಾಗಿ ಈ ಬಿಲ್ಲಿನ ವಿಚಾರ ತೆಗೆದುಕೊಂಡರೆ ಇದು ಕಾನೂನಿಗಿಂತ ಇದರ ರೂಲ್ಸ್ ಹಾಸ್ಯ ಇರುವಂತೆ ಕಾಣುತ್ತಿದೆ. ಇದರಲ್ಲಿ ಪ್ರಾಸಿಕ್ಯೂಷನ್ ವಿಚಾರ ಬೇರೆ ಹೇಳಿದ್ದಾರೆ. ಅದು ದರಿಂದ ನಾನು ಇದನ್ನು ಒಪ್ಪುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಇದು ಒಂದು ಬೇರ್ಡ್ ಬೆರ್ ಎಂದು ಹೇಳಬಹುದು. ಇದರಲ್ಲಿ ಅನೇಕ ದೋಷಗಳಿವೆ. ಇದರಲ್ಲಿ ಎರಡು ತರಹ ಲೈಸೆನ್ಸ್‌ಗಳ ವಿಚಾರ ಹೇಳಿದೆ. ಈ ರೀತಿಯ ವ್ಯತ್ಯಾಸವೇಕೆ ಇರಬೇಕು?

(*a*) a licence granted to a householder in respect of cattle kept in his own premises primarily for the consumption of the milk by himself or by members of his family and for the sale of surplus, if any, not exceeding six litres on any one day;

This is only creating difficulties to the agrarians not to rear cattle, sheep, etc.

ಸ್ವಾಮಿ, ನಮ್ಮ ಮನೆಯಲ್ಲಿ ನಾಲ್ಕು ಹಸುಗಳು ಕರುಹಾಕಿರುತ್ತವೆಂದು ಇಟ್ಟುಕೊಳ್ಳೋಣ. ಅವು ಸಾಮಾನ್ಯವಾಗಿ 25 ಲೀಟರ್ ಹಾಲನ್ನು ಕರೆಯುತ್ತವೆ. ಆದರೆ ಒಂದು ದಿನ ನಾವು ಹಸಿ ಹುಲ್ಲನ್ನು ಹಾಕಿ ಚೆನ್ನಾಗಿ ಮೇಯಿಸಿದರೆ ಅವು 30 ಲೀಟರ್ ಹಾಲನ್ನು ಕರೆಯಬಹುದು. ಆಗ ಆ ಹೆಚ್ಚಿಗೆ ಇರತಕ್ಕ ೫ ಲೀಟರ್ ಹಾಲನ್ನು ಒಬ್ಬರು ಲೈಸೆನ್ಸ್ ಪ್ರಕಾರ ಮಾರಾಟ ಮಾಡಿದರೆ ಅವನು ಶಿಕ್ಷಾರ್ಹನಾಗುತ್ತಾನೆ. ಇಂಥ ಕಾನೂನುಗಳನ್ನು ಜಾರಿಗೆ ತಂದು ಇನ್ನೊಂದು ಕಡೆ ರಾಜ್ಯದಲ್ಲಿ ಮಕ್ಕಳು ಚೆನ್ನಾಗಿ ದೃಢಕಾಯರಾಗಿ ಬೆಳೆಯಬೇಕು. ಆದರದಿಂದ ಅವರಿಗೆ ಚೆನ್ನಾಗಿ, ಹಾಲು, ಬೆಣ್ಣೆಗಳನ್ನು ಕೊಡಬೇಕು ಎಂತ ಬೇರೆ ಹೇಳುತ್ತಿದ್ದಾರೆ. ಇದೇನು ವಿಚಿತ್ರ?

> "any person intending to have a Class 'A' or a class 'B' licence shall apply to the licensing authority in the prescribed manner and the licensing authority may thereafter grant a licence under this Act....."

ಇದನ್ನೆಲ್ಲಾ ನೋಡಿದರೆ ಇನ್ನು ಗಂಡಸರೆಲ್ಲ ಬರಿ ಮಕ್ಕಳನ್ನು ಆಡಿಸಿಕೊಂಡಿರಬೇಕೆಂದು ಹೇಳುತ್ತಾರೋ ಏನೋ?

They have not said who the authority is.

> "Cancellation of licence in certain cases.—Where the licencing authority has reason to believe that a person to whom a licence has been granted has contravened or failed to comply with the conditions of the licence.....cancel the licence or refuse to renew it."

ಇಲ್ಲಿ ಹೀಗೆ ಹೇಳಿದ್ದಾರಲ್ಲಾ ಈ ಲೈಸೆನ್ಸ್ ಕೊಡತಕ್ಕವರು ಯಾರು ಅದು ಗೊತ್ತಿಲ್ಲ. ಆತ ಲೈಸೆನ್ಸ್ ಕೊಡದೆ ಹೋದರೆ ಯಾರಲ್ಲಿ ಅಪೀಲ್ ಹೋಗಬೇಕು ಎಂಬುದನ್ನೂ ಕೂಡ ಇದರಲ್ಲಿ ತಿಳಿಸಿಲ್ಲ. ಲೈಸೆನ್ಸ್ ಕೊಡತಕ್ಕವರು ಇಂಥವರು ಎಂಬುದೇ ಇದರಲಲ್ಲ. ಎಲ್ಲವನ್ನೂ ರೂಲ್ಸಿನಲ್ಲಿ ಪ್ರೊವೈಡ್ ಮಾಡುತ್ತೇವೆಂದರೆ ಇನ್ನು ಬಿಲ್ಲು ಏಕೆ ಇರಬೇಕು? ಇಂಥ ಕಾನೂನುಗಳಿಂದ ಮುಂದೆ ಬಹಳ ತೊಂದರೆ ಆಗುತ್ತದೆ. ಮುಂದೆ ಜನರು ತಮ್ಮ ಧನಕರುಗಳನ್ನೆಲ್ಲಾ ಮಾರಾಟ ಮಾಡಿದಮೇಲೆ ನಾಳೆ ಅವರನ್ನೇ ಎತ್ತಿಗೆ ಬದಲು ನೇಗಿಲಿಗೆ ಹೂಡಿ ಬೇಸಾಯಮಾಡಬೇಕೆಂಬ ಕಾಲ ಬಂದರೂ ಬರಬಹುದು. ಇಂಥ ಸರ್ಕಾರವಿದ್ದರೆ ಏನು ಬೇಕಾದರೂ ಆಗಬಹುದು. ನಾಳೆ ಹೆಂಗಸರು ಗಂಡಸರನ್ನು ನೇಗಿಲಿಗೆ ಹೂಡಿ ಚಾಟಿಯಿಂದ ಹೊಡೆಯುತಕ್ಕ ಕಾಲ ಬರುವಂತೆ ಕಾಣುತ್ತದೆ. ಈ ಕಾಂಗ್ರೆಸ್ ಸರ್ಕಾರ ಇನ್ನೂ ಏನೇನು ಮಾಡುತ್ತದೆ ಎಂಬುದನ್ನು ನಾವು ಊಹಿಸುವುದಕ್ಕೂ ಸಾಧ್ಯವಿಲ್ಲ. ಧನಗಳನ್ನು ಸಾಕತಕ್ಕವರ ಮೇಲೆ ಸರ್ಕಾರದವರಿಗೆ ಏಕೆ ಇಷ್ಟು ಉಗ್ರವಾದ ಕೋಪ ವಿದೆಯೋ ಗೊತ್ತಾಗುವದಿಲ್ಲ.

ಇನ್ನು ಧನಗಳನ್ನು ಸಾಕತಕ್ಕವರ ಕೊಟ್ಟಿಗೆಗಳನ್ನು ಎಗ್ಜಾಮಿನ್ ಮಾಡಬೇಕು ಎಂದು ಬೇರೆ ಹೇಳಿದ್ದಾರೆ. ಅದೇತಕ್ಕೋ ನಾನು ಕಾಣೆ. ಆತ ಒಂದು ಕೊಟ್ಟಿಗೆಯಲ್ಲ ಏನು ಎಗ್ಜಾಮಿನೇಷನ್ ಮಾಡುವುದು? ಗೂಟಗಳನ್ನು ಎಷ್ಟು ದೂರಕ್ಕೆ ಹಾಕಿದ್ದಾರೆಂಬುದನ್ನೇ, ಅಥವಾ ಎಷ್ಟು ಹಾಲು ಕೊಡುತ್ತವೆ ಎಂಬುದನ್ನೇ, ಅಥವಾ ಅವು ಎಷ್ಟು ಸಗಣಿ ಹಾಕುತ್ತವೆ ಎಂಬುದನ್ನೇ, ಅಥವಾ ಹಸುಗಳು ಮಲಗಿವೆಯೇ ಅಥವಾ ನಿಂತಿವೆಯೇ ಎಂಬುದನ್ನು ನೋಡುವುದೇ ಏನು ಎಂಬುದೇ ಗೊತ್ತಾಗುವುದಿಲ್ಲ. ಅಂತೂ ಇಂಥ ಕಾನೂನುಗಳಿಂದ ಈ ಸಂಡೆ ರಾಯರುಗಳಿಗೆ ದಿವಸಕ್ಕೆ ಇಂಥ ಒಂದೊಂದು ಕೇನನ್ನು ಹಿಡಿದರೂ, ದಿನಕ್ಕೆ ಹತ್ತು ರೂಪಾಯಿಗಳಂತೆ ಮೂವತ್ತು ದಿವಸಕ್ಕೆ 300 ರೂಪಾಯಿ ಸಂಪಾದನೆ ಆಗುತ್ತದೆ. ಇದರಿಂದ ಜನಗಳಿಗೆ ಮತ್ತಷ್ಟು ತೊಂದರೆಯೇ ವಿನಾ ಅವರಿಗೆ ಇದರಿಂದ ಅನುಕೂಲವೇನೂ ಆಗುವುದಿಲ್ಲ. 9ನೇ ಕ್ಲಾಜು ಎಂದು ಇಲ್ಲಿ ಮಾಡಿರುವುದು ಸರಿಯಾಗಿಲ್ಲ ಮತ್ತು ಅದು ಇಲ್ಲಿ ಸೂಕ್ತವಾಗಿಯೂ ಕಾಣುತ್ತಿಲ್ಲ. ಪೊನ್ನೆ ಯಾರೋ ಅಮೆರಿಕಾದಿಂದ ಬಂದವರೊಬ್ಬರು ನನ್ನೊಡನೆ ಕೆನಡಿ ಸತ್ತ ವಿಚಾರವಾಗಿ ಮಾತನಾಡುತ್ತ ಅಲ್ಲಿರುವ ಧನಗಳು ರಸ್ತೆಯಲ್ಲಿ ಹೇಗೆ ಹೋಗುತ್ತಿದ್ದರೂ ಅವಕ್ಕೊಂದೂ ಅಕ್ಕಿಡೆಂಟಾಗುವುದಿಲ್ಲ ಬಂದು ಹೇಳಿದರು. ಹಾಗೆ ಮೂಕ ಪ್ರಾಣಿಗಳಿಗೆ ತಿಳುವಳಿಕೆಯಿರುವಾಗ ಮನುಷ್ಯರಿಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

4-00 P. M.

'ನರಜನ್ಮವೇತಕೆ.....' ಎಂದು ಮುಂತಾಗಿ ಹೇಳುವಂತೆ ತಿಳುವಳಿಕೆ ಇರುವುದು ಬೇಡವೇ ! ಹೀಗೆ ಮೂಕ ಪ್ರಾಣಿಗಳಮೇಲೆ ಹತೋಟಿ ಇರುವಂತಹ ಕಾನೂನನ್ನೇಕೆ ಮಾಡಲು ಹೊರಟಿದ್ದೀರಿ ? ಅಮೆರಿಕಾದಲ್ಲಿ ಅಷ್ಟೊಂದು ಕಾರುಗಳು ಓಡಾಡುತ್ತಿದ್ದರೂ ಕೂಡ ಒಂದು ದನಕ್ಕಾಗಲೀ ಎಮ್ಮೆಗಾಗಲೀ ಒಂದು ಆಕ್ಸಿಡೆಂಟು ನಹಾ ಆಗುವುದಿಲ್ಲ ಎಂದು ನನ್ನ ಸ್ನೇಹಿತರೊಬ್ಬರು ಹೇಳಿದ ಹಾಗೆ...

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ಹಿಂದೂಸ್ಥಾನದಲ್ಲಿ ಎಲ್ಲಿಯಾದರೂ ಇಂತಹ ಕಾನೂನನ್ನು ಮಾಡಲಾಗಿದೆಯೇ ಎಂದು ಕೇಳುತ್ತಿದ್ದೀರೇನು ! (ನಗು).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನೂ ಅದನ್ನೇ ಕೇಳುತ್ತಿದ್ದೇನೆ. ತಮ್ಮಂತಹವರು ಅಡಳಿತ ಪಕ್ಷದಲ್ಲಿ ತುಂಬಾ ಮೇಧಾವಿಗಳು ಆಗಿರುವುದರಿಂದ ಇಂತಹ ಯಾವುದಾದರೂ ಕಾನೂನನ್ನು ಎಲ್ಲಿಯಾದರೂ ಮಾಡಿದ್ದಾರೆಯೇ ಎಂದು ನಾನು ಇಲ್ಲಿ ಕೇಳುತ್ತಿದ್ದೇನೆ. ದನಕರುಗಳಂತಹ ಮೂಕ ಪ್ರಾಣಿಗಳಿಗೇಕೆ ತೊಂದರೆ ಕೊಡಬೇಕು ಎಂದು

'ಇಟ್ಟರೇ ನಗಣಿಯಾದೆ ತಟ್ಟಿದರೆ ಕುರುಳಾದೆ
ಸುಟ್ಟರೇ ನೊಸಲಿಗೆ ವಿಭೂತಿಯಾದೆ
ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ
ನೀನಾರಿಗಾದೆಯೋ ಎಲೆ ಮಾನವಾ' ಎಂದಂತೆ.....

ಹೀಗೆ ಮಾತನಾಡದೆ ಇರುವಂತಹ ಮೂಕಪ್ರಾಣಿಗಳ ಮೇಲೆ ಹೀಗೆ ಕಡಿವಾಣ ಹಾಕುವುದು ಸರಿಯಲ್ಲ.

ನಾನು ಇನ್ನೂ ಸ್ವಲ್ಪ ಮುಂದೆ ಹೋಗುತ್ತೇನೆ. 10ನೇ ಸೆಕ್ಷನ್ನಿನಲ್ಲಿ ಪೆನಾಲ್ಟೀಸ್ ಎಂದ

(1) Any person who :
(i) contravenes the provisions of section 3, or
(ii) being the holder of Class A licence sells milk in excess of six litres on any one day, or
(iii) keeps cattle in any premises or places different from that mentioned in the licence, or
(iv) keeps cattle in excess of the maximum number or different in description from, that stated in the license, shall, on conviction, be punished with fine which may extend to one thousand rupees, etc., etc.,

ಹೀಗೆ ದನ ಕರ ಸಾಕುವವರಿಗೆ ಈ ರೀತಿಯಾದ ಜುಲ್ಮಾನೆಯನ್ನು ಹಾಕುವುದು ಸರಿಯಾಗಿ ಕಾಣುವುದಿಲ್ಲ. ಇದೇ ರೀತಿ ಎಲ್ಲ ಕಾನೂನುಗಳಲ್ಲಿಯೂ ಬರುತ್ತದೆ. ಆದರೆ ಇಲ್ಲ ಇಷ್ಟು ಹೆಚ್ಚಿಗೆ ಹಾಕುವುದಕ್ಕಿಂತ ಒಂದು ನೂರು ಅಥವಾ ಐವತ್ತು ರೂಪಾಯಿಗಳನ್ನು ಎಂದು ಬೇಕಾದರೆ ಹಾಕಬಹುದು ಅದನ್ನು ಬೇಡ ಎಂದು ಹೇಳುವುದಿಲ್ಲ.

12ನೇ ಕ್ಲಾಜಿನವರೆಲ್ಲ ಎಕ್ಸ್‌ಂಪ್‌ಷನ್ನು ವಿಚಾರವಾಗಿ ಹೇಳಿರುವುದು ಇಲ್ಲಿರುವ ಹೆಬ್ಬಾಳು, ಹಾಗೂ ಹೆಸರುಘಟ್ಟಗಳಲ್ಲಿರುವ ಇನ್ಸಿಟ್ಯೂಷನ್ನುಗಳಿಗೆ ಅನುಕೂಲವಾಗಲಿ ಎಂದು ಇಟ್ಟುಕೊಂಡಿದ್ದಾರೆಂದು ತೋರುತ್ತದೆ. ಇಂತಹ ಕ್ಲಾಸುಗಳಿದ್ದರೆ ಇದರಿಂದೇನೂ ಅಂತಹ ತೊಂದರೆ ಬರುವುದಿಲ್ಲ.

ಇನ್ನು ಪೆನಾಲ್ಟೀಸ್ ಕ್ಲಾಜು 10ರಲ್ಲಿ

(2) Where a person is convicted of any offence under this section the *court* may direct that the cattle in respect of which the offence is committed shall be forfeited to Government.

ಕೋರ್ಟು ಎಂದರೆ ಯಾವ ಕೋರ್ಟು? ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟು ಕೋರ್ಟೇ ಹೆಕೆಂಡು ಮ್ಯಾಜಿಸ್ಟ್ರೇಟು ಕೋರ್ಟೇ ಎನ್ನುವುದು ಇದರಲ್ಲೆನೂ ಗೊತ್ತಾಗುತ್ತಿಲ್ಲ. ಇದಕ್ಕೋಸ್ಕರವಾಗಿ ನಾನು ನಗರಾಡಳಿತ ಶಾಖೆಯ ಮಂತ್ರಿಯವರನ್ನು ಕೇಳುತ್ತಿರುವುದು ಇವನ್ನೆಲ್ಲಾ ಸ್ವಲ್ಪ ಸಾವಧಾನವಾಗಿ ನೋಡಬೇಕು. ಇದಕ್ಕಾಗಿ ಬೇಕಾದರೆ ಇನ್ನೂ ಎರಡು ವರ್ಷಗಳನ್ನು ಕಾಲಾವಕಾಶ ಬೇಕಾದರೂ ತೆಗೆದುಕೊಳ್ಳಬಹುದು. ಆದುದರಿಂದ ಈಗ ತಂದಿರುವ ಈ ಬಿಲ್ಲನ್ನು ವಾಪಸು ತೆಗೆದು ಕೊಳ್ಳಬೇಕೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಸ್ಯಾಮೀ, ಈ ಕ್ಯಾಟಲ್ಲು ಲೈಸೆನ್ಸಿಂಗು ಬಿಲ್ಲು ಮತ್ತು ಇದರೊಳಗಿರುವ ಕ್ಲಾಜುಗಳನ್ನು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಿ ನೋಡಿದರೆ ಮತ್ತು ಈಗಲೇ ಈ ಸಭೆಯಲ್ಲಿ ಪಾಸು ಮಾಡಿದರೆ ಸರಿಯಾಗಿರುವುದಿಲ್ಲ ಎಂದು ನನಗೆ ತೋರುತ್ತದೆ. ಇದನ್ನೆಲ್ಲಾ ಪರಿಶೀಲನೆ ಮಾಡಲು ಈ ಬಿಲ್ಲನ್ನು ಸ್ವಲ್ಪ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಕೊಟ್ಟರೆ ಚೆನ್ನಾಗಿರುತ್ತದೆ. ಹಾಗೆ ಕಳುಹಿಸಲು ಎರಡು ಮೂರು ಕಾರಣಗಳನ್ನು ಇಲ್ಲಿ ಹೇಳುತ್ತೇನೆ.

ಕ್ಲಾಜು 2ರಲ್ಲಿರುವ ಡೆಫಿನಿಷನ್ನು (ಡಿ)ನಲ್ಲಿ ಹೌಸುಹೋಲ್ಡರು ಎನ್ನುವುದಕ್ಕೆ ವಿವರಣೆ ಸರಿಯಾಗಿಲ್ಲ. ಇದನ್ನು ಇನ್ನೂ ಸ್ವಲ್ಪ ವಿಶದೀಕರಿಸಿದರೆ ಸರಿಯಾಗುತ್ತದೆ. ಹೀಗೇ ಇದ್ದರೆ ಇದರಿಂದ ಯಾರು ಬೇಕಾದರೂ ಬಂದು ಮನೆಯನ್ನು ನುಗ್ಗಿ ಅದು ಮುಂದೆ ನನ್ನದೇ ಎಂದಾಗ ಬಹುದು. ಇದಕ್ಕೆ ಸ್ವಲ್ಪ ತಿದ್ದುಪಡಿ ಮಾಡುವುದು ಅಗತ್ಯ.

ಇನ್ನೂ ಮುಂದೆ (ಐ)ನಲ್ಲಿರುವ (2)ನೇ ಕ್ಲಾಜಿನಲ್ಲಿ

"any area which the State Government in view of its development and growing population declares to be an urban area."

ಹೀಗೆ ಇರುವುದಕ್ಕೆ ಬದಲಾಗಿ ಟೌನು ಪಂಚಾಯತಿ ಏರಿಯಾ ಎಂದು ಇದ್ದರೆ ಸರಿಯಾಗಿರುತ್ತದೆ.

ಇನ್ನು 4ನೇ ಕ್ಲಾಜಿನಲ್ಲಿ ಎರಡು ವಿಧವಾದ ಲೈಸೆನ್ಸುಗಳಿರುವುದೆಂದು ಹೇಳಿದ್ದಾರೆ. ಇದರಲ್ಲಿ (ಎ) ಕ್ಲಾಜಿನಲ್ಲಿ

(*a*) a licence granted to a householder in respect of cattle kept in his own premises primarily for the consumption of the milk by himself or by members of his family and for the sale of surplus, if any, not exceeding six litres on any one day ;

ಎಂದು ಇದೆ. ಇದರ ವಿವರಗಳು ಸರಿಯಾಗಿಲ್ಲ ಎಂದು ನನಗನಿಸುತ್ತದೆ. ಇದನ್ನು ಸ್ವಲ್ಪ ಡೀಸೆಂಟಾಗಿ ಪರಿವರ್ತನೆ ಮಾಡುವುದು ಅವಶ್ಯಕ ಎಂದು ತೋರುತ್ತದೆ.

ಅಲ್ಲದೆ ಇದಕ್ಕೆ ಸಂಬಂಧಪಟ್ಟಹಾಗೆ ಕ್ಲಾಜು 10ರಲ್ಲಿರುವ (iv)ನೇ ಸೆಕ್ಷನ್ನಿನಲ್ಲಿ

"(iv) keeps cattle in excess of the maximum number, or different in description from, that stated in the licence shall, on conviction be punished with fine which may extend to one thousand rupees"...

ಎಂದು ಹೀಗೆ ಕ್ವಾಂಟಿಟಿಯ ಮೂಲಕ ಹೇಳಲಾಗುತ್ತಿದ್ದೀರಿ.

ಆರು ಲೀಟರ್ ಕೊಡಬೇಕಾದರೆ ಎಷ್ಟು ದನ ಬೇಕು. ನಾವೂ ದನ ಇಟ್ಟಿರುವವರು. ತಾವು ಇಟ್ಟಿದ್ದೇವೆ ಅಂತ ಹೇಳುವುದಾದರೆ ಹಸು, ಎಮ್ಮೆಗಳು ಸತ್ತುಹೋಗುತ್ತವೆನ್ನುವುದು ಗೊತ್ತಿರಬೇಕು. ಅದೂ ಅಲ್ಲದೆ ಅವು ಹಾಲು ಕೊಡುತಕ್ಕಂಥ ಸಮಯದಲ್ಲಿರುವ ಸಂದರ್ಭವನ್ನೂ ಅವಲಂಬಿಸಿರುತ್ತದೆ. ಹಾಲು ಕರೆಯುತಕ್ಕಂಥವರು ಬೇರೆ ಆದಾಗ ಅಥವ ಅದರ ಆಹಾರ ಅದಕ್ಕೆ ಸರಿ ಹೊಂದುವಿದ್ದರೆ, ಅದಕ್ಕೆ ಇಷ್ಟ ಬರುವಿದ್ದರೆ, ಹಸು ಒದ್ದುಬಿಟ್ಟು ಹಾಲನ್ನೇ ಕೊಡುವುದಿಲ್ಲ. ನೀವು ಕಾನೂನಿನ ಪ್ರಕಾರ ಅದು ಇಷ್ಟೇ ಕೊಡಬೇಕೆಂದರೆ ಅದು ಆಗುವ ಮಾತಲ್ಲ. ಅದು ನೀವು

(ಶ್ರೀ ಎಚ್. ಆರ್. ಕೇಶವಮೂರ್ತಿ)

ನಿಯಮಿಸಿರುವಷ್ಟು ಹಾಲು ಒಂದೇ ಸಮನೆ ಕೊಡುವುದಿಲ್ಲ. ಅದಕ್ಕೋಸ್ಕರ decent margin ಕೊಡಬೇಕು. 10 ಲೀಟರ್ ಅಂತ ಇಟ್ಟುಕೊಂಡರೆ, 2-3 ದಿನ ಆಲ್ಟರ್‌ನೇಟ್‌ವಾಗಿ ಕೊಟ್ಟೇ ಕೊಡಬೇಕು. ಒಂದು ರಾಸಿಗೆ ಆರು ಲೀಟರ್ ಅಂತ ಇಟ್ಟುಕೊಂಡರೆ ಅದು ಕಾನೂನುಬದ್ಧವಾಗಿ ಹಾಲು ಕೊಡುವುದಿಲ್ಲ. ಹಾಗೆ ಕರೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ರೂಲ್ಸ್ ಮಾಡುವಾಗ, ಲಿಬರಲೈಸ್ ಮಾಡಿ ಮಾಡಬೇಕು. ಇನ್ನೊಂದು ಅಂಶವೇನೆಂದರೆ ಹನು ಬರದು ಆಗ ಬಹುದು; ಕರು ಸತ್ತು ಹೋದರೆ ಹಾಲು ಕೊಡುವುದಿಲ್ಲ. ಇಂಥ ಸಂದರ್ಭಗಳನ್ನೆಲ್ಲಾ ಯೋಚನೆ ಮಾಡಿ ದೊಡ್ಡ ಮಾರ್ಜಿನ್ ಕೊಟ್ಟು ರೂಲ್ಸ್ ಮಾಡಬೇಕು. For the sale of surplus, not exceeding six litres on any day ಅಂತಿದೆ: ಈ ಕ್ವಾಂಟಿಟಿ ಬಹಳ ಕಡಿಮೆ. ಈ ಕ್ವಾಂಟಿಟಿಯನ್ನು 20 ಲೀಟರಿಗಾದರೂ ಏರಿಸಬೇಕೆಂದು ನನ್ನ ಸಲಹೆ.

ಕ್ಲಾಜ್ 5 (3)ರಲ್ಲಿ, ಇಲ್ಲಿ ನಂಬರ್ ತೆಗೆದುಹಾಕಬೇಕು, ಇಲ್ಲಿ ಕ್ವಾಂಟಿಟಿ ತೆಗೆಯಬೇಕು. ನಂಬರ್ ಕ್ಲಾಜು ಕ್ವಾಂಟಿಟಿ ಫಿಕ್ಸ್ ಮಾಡಬಾರದು. ಒಂದು ಕ್ವಾಂಟಿಟಿ ಇಟ್ಟರೆ ಸಾಕು.

ಕ್ಲಾಜು 8 (2)ರಲ್ಲಿ ಈಗ ಕೊಟ್ಟಿರುವ ಲೈಸೆನ್ಸುಗಳಿಗೆ ಆರು ತಿಂಗಳು ಮಾತ್ರ ಪ್ರೊವೈಡ್ ಮಾಡಿದ್ದಾರೆ. ಈ ಕಾನೂನನ್ನು ಹೊಸದಾಗಿ ಜಾರಿಗೆ ತರುತ್ತಿದ್ದೀರ. ದನಗಳನ್ನು ಕಟ್ಟಿಕೊಂಡಿರುವವರಿಗೆ ಕೇವಲ ಆರು ತಿಂಗಳಲ್ಲಿ ಸ್ಥಳ ಖಾಲಿ ಮಾಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಅವುಗಳನ್ನು ಪ್ರೊಹಿಬಿಟೆಡ್ ಏರಿಯಾದ ಹೊರಗಡೆ ಕಳುಹಿಸಬೇಕಾಗುತ್ತದೆ. ಬೊಂಬಾಯಿ ಸ್ಟೇಟಿನಲ್ಲಿ ಈ ಕಾನೂನನ್ನು ತಂದಾಗ ದನಗಳನ್ನು ಇಟ್ಟುಕೊಂಡಿರುವ ಜನತೆಗೆ ದನಗಳನ್ನು ಸಾಕಲು ಬೇರೆ ಕಾಲೋನಿ, ಕ್ವಾರ್ಟರ್ಸ್ ಮಾಡಿಕೊಟ್ಟರು. ಈ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಟ್ಟರೂ, ಆರು ತಿಂಗಳಲ್ಲಿ ಖಾಲಿ ಮಾಡಬೇಕೆಂದರೆ ಬೇಕಾದಷ್ಟು ಲುಕ್ಸಾನು ದನ ಕಟ್ಟಿಕೊಂಡಿರುವವರಿಗೆ ಆಗುತ್ತದೆ. ಆರು ತಿಂಗಳು ಕೇವಲ ಕಡಿಮೆ. ಇದನ್ನು ಕೊನೆಯಪಕ್ಷ ಒಂದು ವರ್ಷಕ್ಕೆ ಏರಿಸಬೇಕು.

ಹೆನಾಲ್ಟಿ ಕ್ಲಾಜಿನೊಳಗೆ, ಕನ್‌ವಿಕ್ಷನ್ ಆದರೆ, ಕ್ಯಾಟರ್‌ನ್ನು ಸರಕಾರಕ್ಕೆ ಫರ್‌ಫೀಟ್ ಮಾಡಿಕೊಳ್ಳಬೇಕೆಂದು ಹೇಳಿದೆ. ಸಾಮಾನ್ಯವಾಗಿ ಸರಕಾರಕ್ಕೆ ಆಗಲಿ, ಮನುಷ್ಯನಿಗೆ ಆಗಲಿ ಜಾನುವಾರುಗಳನ್ನು ಸಾಕುವುದು ಕಷ್ಟ. ಫರ್‌ಫೀಟ್ ಮಾಡಿದ ದನಗಳನ್ನು ಸರಕಾರದವರು ಎಲ್ಲಿಡುತ್ತಾರೆ. ಸಣ್ಣಸಣ್ಣ ಹಳ್ಳಿಗಳಲ್ಲಿ ದೊಡ್ಡಿಗಳನ್ನು ಮಾಡುವುದು ಸಾಧ್ಯವೆ. ಟೌನುಗಳಲ್ಲಿ ಸಾವಿರಾರು ರಾಸುಗಳನ್ನು ಫರ್‌ಫೀಟ್ ಮಾಡಿಕೊಳ್ಳುತ್ತೀರ? ಈ ಸಾವಿರಾರು ದನಗಳನ್ನು ಇಡುವುದಕ್ಕೆ ಸ್ಥಳ ವೆಲ್ಲ, ಅವುಗಳನ್ನು ಸಾಕುವುದಕ್ಕೆ ಸೌಕರ್ಯವನ್ನು ಒದಗಿಸುವುದು ಸಾಧ್ಯವೆ. ಅವು ಸತ್ತು ಅದರ ಪಾಪ ಸರಕಾರಕ್ಕೆ ಬರುತ್ತದೆ. ಅವನ್ನು ಸಾಕುವ ವ್ಯವಸ್ಥೆ ಮಾಡುವುದು ಸರಕಾರಕ್ಕೆ ಅಸಾಧ್ಯ. ಫೈನ್ ಇರಲಿ, ಫೈನ್ ಕೊಡಿಸಿ ಇದ್ದರೆ ಇಂಪ್ರಿಸನ್‌ಮೆಂಟ್ ಮಾಡಿ ದನಗಳನ್ನು ತೆಗೆದುಕೊಂಡು ಹೋಗಿ ದೊಡ್ಡಿಗಳಿಗೆ ಹಾಕಿ. ಎರಡನೆ ಕ್ಲಾಜನ್ನು ಎಲಿಮಿನೇಟ್ ಮಾಡಿ. ದನಗಳು ಏನು ಪಾಪ ಮಾಡಿವೆ, ಹೊಟ್ಟೆಗಿಲ್ಲದೆ ಸಾಯುವುದಕ್ಕೆ.

ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಪರಿಷ್ಕಾರ ಮಾಡಬೇಕು. ಈ ಕಾನೂನು ಮಾಡುವುದು ಒಳ್ಳೆಯದು. ಆದರೆ ವಿವೇಚನೆ ಇಲ್ಲದೆ ಕಾನೂನು ಮಾಡಿದರೆ ಆ ಮೂಕಪ್ರಾಣಿಗಳನ್ನು ಕೊಲ್ಲುತ್ತೇವೆ. ಆದ್ದರಿಂದ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಒಂದು ಶ್ರೇಷ್ಠಕರವಾದ ಕಾನೂನು ಮಾಡುವುದು ಒಳ್ಳೆಯದು.

†ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಸ್ವಾಮಿ, ಈ ಕ್ಯಾಟರ್ ಲೈಸೆನ್ಸಿಂಗ್ ವ ಸೂದೆಯನ್ನು ಸ್ವಾಗತಿಸಿ ಎರಡು ಮಾತುಗಳನ್ನು ಆಡುತ್ತೇನೆ. ಬೆಂಗಳೂರು ನಗರದಲ್ಲಿ ವಾಸಿಸುವ ಜನಗಳ ಸುಖವನ್ನೇ ನೋಡಬೇಕಾದ್ದು ಬಹಳ ಮುಖ್ಯ. ನಮ್ಮ ಸ್ನೇಹಿತರು ಅನೇಕರು ಹೇಳಿದರು, ಈ ಬಿಲ್ಲಿನಂತೆ ಪಶುಗಳನ್ನು ಪಾಲನೆ ಮಾಡುವುದು ಬಹಳ ಕಷ್ಟ ಅಂತ. ಹಸುಗಳನ್ನು ನಗರಗಳಲ್ಲಿ ಸಾಕುವುದಕ್ಕೆ ಬಿಡುವುದು ಬಹಳ ತಪ್ಪಾಗುತ್ತದೆ. ನಮ್ಮ ಸ್ನೇಹಿತರು ಒಬ್ಬರು ಹೇಳಿದರು, ಒಂದು ಮನೆಯಲ್ಲಿ ಒಂದು ಹಸುವನ್ನು ಸಾಕುವುದಕ್ಕೆ ಲೈಸೆನ್ಸ್ ತೆಗೆದುಕೊಳ್ಳಬೇಕಾಗುತ್ತದೆಂದು ಬೆಂಗಳೂರಿನಲ್ಲಿ ತಮ್ಮ ಸ್ವಂತಕ್ಕಾಗಿ ಹಾಲನ್ನು ಉಪಯೋಗಿಸಲು ಹಸು, ಎಮ್ಮೆ ಸಾಕುವವರು ಶೇಕಡ 2-3 ರಷ್ಟು ಜನರಿಲ್ಲದಿರಬಹುದು. ಬೆಂಗಳೂರಿನಲ್ಲಿ ಹಸು, ಎಮ್ಮೆಗಳನ್ನು ಸಾಕಿರುವವರು ಸಾಮಾನ್ಯವಾಗಿ ಹಾಲನ್ನು ವ್ಯಾಪಾರ ಮಾಡುತ್ತಾ ಇರುವವರೇ; ಇದು ನಮ್ಮ ಅನುಭವದ ಮಾತು. ಬೆಂಗಳೂರು ಪಟ್ಟಣದಲ್ಲಿ ಕನ್‌ಸರ್ವೆನ್ಸಿಗಳೊಳಗೆ ಎಮ್ಮೆಗಳನ್ನು ಹಸುಗಳನ್ನು ಕಟ್ಟುತ್ತಾರೆ; ಹೀಗೆ ಅನ್‌ಅಥರೈಸ್ಡ್ ಆಗಿ ಹಸುಗಳನ್ನು ಎಮ್ಮೆಗಳನ್ನು ಸಾಕುತ್ತಿರುತ್ತಾರೆ. ಬೆಂಗಳೂರು ಸಿಟಿಯೊಳಗೆ

ಹೇಳುವುದಾದರೆ, ವೋರಿಯೊಳಗೆ (ಸ್ಕೂಟರ್‌ನಿಂದ) ಶೇಷಾದ್ರಿಪುರ ಮುಂತಾದ ಕಡೆ ನೋಡುವಂತೆ, ಕಕ್ಕಸನ್ನು ನೀರು ಹರಿಯುವುದಕ್ಕೆ, ಕಾರಣ ಈ ಎಮ್ಮೆ ಹಸುಗಳನ್ನು ಸಾಕುವವರೇ. ರಾತ್ರಿ ಹೊತ್ತು ಇವರುಗಳು ವ್ಯಾನ್‌ಹೋಲೆನಲ್ಲಿ ನಗಣಿ, ಹುಲ್ಲು ಎಲ್ಲಾ ತುಂಬಿಬಿಡುತ್ತಾರೆ. ಪ್ಯೆಪುಗಳಿಗೂ ಇದು ಒಂದು ತೊಂದರೆಯಾಗಿದೆ. ನಗರದ ಚರಂಡಿಗಳಲ್ಲಿಯೂ ನಗಣಿ ಮತ್ತು ಹುಲ್ಲನ್ನು ಹಗಲು ಹೊತ್ತಿನಲ್ಲಿಯೇ ಬಿಚ್ಚುಬಿಡುತ್ತಾರೆ. ಇದರಿಂದ ನಗರದ ನೈರ್ಮಲ್ಯ ಕೆಟ್ಟುಹೋಗುತ್ತಿದೆ. ವ್ಯಾಪಾರ ರೀತಿಯಲ್ಲಿ ಈ ಕಸಬನ್ನು ಮಾಡುವವರಿಗೆ ಮದ್ಯಾನಿನಲ್ಲಿ ಇಷ್ಟಹಾಗೆ ಒಂದು ಮಿಲ್ಕ್ ಕಾರೋನಿ ಇಡುವುದು ಒಳ್ಳೆಯದು. ನಗರದ ಮಧ್ಯಭಾಗದಲ್ಲಿಯೋ ಅಥವಾ ಸ್ವಲ್ಪ ಹೊರಗಡೆಯೋ ಅವರಿಗೆ ಅವುಗಳನ್ನು ಸಾಕಲು ಸೌಕರ್ಯವನ್ನು ಕಲ್ಪಿಸಿಕೊಡಬೇಕಾದುದು ಸರಕಾರದ ಕರ್ತವ್ಯ. ಹಿಂದೆ ಈ ವಿಚಾರದಲ್ಲಿ, ಕಳೆದವರ್ಷ, ಮಾತನಾಡಿದ್ದೇನೆ.

ಇಂಥ ಕಾನೂನನ್ನು ಮಾಡಬೇಕಾದ್ದು ಬಹಳ ಮುಖ್ಯವಾಗಿದೆ. ಇಲ್ಲದೆ ಇದ್ದರೆ ಫುಟ್ ಪಾತಿನ ಮೇಲೆ ಬೆಳಿಗ್ಗೆ ನೋಡಿದರೆ ಬೆರಣಿಯನ್ನು ತಪ್ಪಿಸುತ್ತಾರೆ. ಹೊಸ ಕಟ್ಟಡದ ಗೋಡೆಗಳ ಮೇಲೆ ಬೆರಣಿಯನ್ನು ತಪ್ಪಿಸುತ್ತಾರೆ. ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗುವುದಲ್ಲದೆ ಸೊಳ್ಳೆಗಳ ಕಾಟವೂ ಜಾಸ್ತಿಯಾಗುತ್ತದೆ, ಈ ದೃಷ್ಟಿಯಿಂದ ನಾನು ಈ ಮಸೂದೆಯನ್ನು ಸ್ವಾಗತಿಸಬೇಕಾಗಿದೆ.

ಅನೇಕ ಜನ ಪಾನಮಾಡುವ ಮನೆ ಬಹಳ ಚಿಕ್ಕದಾಗಿರುತ್ತದೆ. ಅದರಲ್ಲಿಯೇ ಪಶುಗಳನ್ನು ಕಟ್ಟಿಕೊಂಡು ಅವುಗಳ ಜೊತೆಯಲ್ಲಿಯೇ ಮಲಗಿಕೊಳ್ಳುತ್ತಾರೆ. ಇಂಥ ಅನಾರೋಗ್ಯ ವಾತಾವರಣದಲ್ಲಿ ದನಗಳ ಜೊತೆಯಲ್ಲಿ ಮನುಷ್ಯರೂ ಪಾನಮಾಡುವುದು ಬಹಳ ತಪ್ಪಾಗಿರುತ್ತದೆ. ಇದನ್ನು ತಪ್ಪಿಸುವುದಕ್ಕೆ ಲೈಸೆನ್ಸ್ ತೆಗೆದು ಕೊಳ್ಳುವಂತೆ ಮಾಡುವುದು ಬಹಳ ಒಳ್ಳೆಯದು. ಸೌದೆ, ಹುಲ್ಲು ಮುಂತಾದವನ್ನು ಮಾರಾಟ ಮಾಡಬೇಕಾದರೆ ಲೈಸೆನ್ಸ್ ಪದ್ಧತಿ ಹೇಗೆ ಇದೆಯೋ ಹಾಗೆಯೇ ಇದಕ್ಕೂ ಮಾಡಬಹುದು. ಅಲ್ಪ ಹಣವನ್ನು ತೆಗೆದುಕೊಂಡು ಲೈಸೆನ್ಸ್ ಕೊಟ್ಟು ಇದನ್ನು ಕ್ರಮ ಪಡಿಸಿದರೆ, ಕ್ರಮಬದ್ಧವಾಗಿ ನಡೆದು ಕೊಂಡು ಬಂದರೆ ಒಳ್ಳೆಯದಾಗುತ್ತದೆ. ಬೆಂಗಳೂರು ನಗರದಲ್ಲಿ ಮತ್ತು ಇತರ ನಗರಗಳಲ್ಲಿ ಪಶುಪಾಲನೆಯನ್ನು ಮಾಡಲು ಪ್ರತ್ಯೇಕವಾದ ಸ್ಥಳವನ್ನು ನಿರ್ಮಿಸಿ ಅದನ್ನು ನಗರದಿಂದ ಸ್ವಲ್ಪದೂರ ಇಟ್ಟು ಮಿಲ್ಕ್ ಕಾರೊನಿ ಮಾಡಿ ಹಾಲನ್ನು ಮಾರಾಟ ಮಾಡಲು ಸಹಕಾರ ಸಂಘಗಳ ಮೂಲಕ ಅಥವಾ ಬೇರೆ ರೀತಿಯಲ್ಲಿ ಅನುಕೂಲವನ್ನು ಕಲ್ಪಿಸಿಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕು. ಈಗ ಇರುವಂತೆ ನಗರಗಳ ಮಧ್ಯಭಾಗದಲ್ಲಿ ಪಶುಪಾಲನೆಯನ್ನು ಕೈಗೊಳ್ಳುವುದು ಆರೋಗ್ಯ ದೃಷ್ಟಿಯಿಂದ ಒಳ್ಳೆಯದಲ್ಲ. ಆದರಿಂದ ಈ ಕಾನೂನು ತಂದದ್ದು ಒಳ್ಳೆಯದು. ಇದು ಬಹಳ ದಿಟ್ಟತನದ ಮಸೂದೆಯಾಗಿದೆ. ಇದನ್ನು ನಾನು ಸ್ವಾಗತಿಸುತ್ತೇನೆ.

† ಶ್ರೀ ಎಸ್. ಗೊಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಜಾನುವಾರುಗಳನ್ನು ಪಟ್ಟಣಗಳಲ್ಲಿ ಸಾಕುವ ಬಗ್ಗೆ ಸರ್ಕಾರದಿಂದ ಲೈಸೆನ್ಸ್ ಪಡೆಯಬೇಕು ಎಂದು ಈ ಮಸೂದೆಯಲ್ಲಿ ಏನು ಸೂಚಿಸಿದ್ದಾರೆ ಈ ಉದ್ದೇಶ ಆರೋಗ್ಯ ದೃಷ್ಟಿಯಿಂದ, ಆಧುನಿಕ ಜನಜೀವನದ ದೃಷ್ಟಿಯಿಂದ, ಯಂತ್ರಗಳ ಓಡಾಟದ ದೃಷ್ಟಿಯಿಂದ ಬಹಳ ಒಳ್ಳೆಯದು. ಆದರೆ ಆರ್ಥಿಕ ಸ್ಥಿತಿಗತಿಯ ದೃಷ್ಟಿಯಿಂದ ಇವತ್ತು ನಮ್ಮ ಜನ ಯಾವ ಸ್ಥಿತಿಯಲ್ಲಿದ್ದಾರೆ ಎನ್ನುವುದು ಬಹಳ ಮುಖ್ಯವಾದ ವಿಷಯ; ಸರ್ಕಾರದವರು ಗಮನದಲ್ಲಡಬೇಕಾದ ವಿಷಯ; ಇಂಥ ಕಾನೂನುಗಳನ್ನು ತರುವಾಗ ಮತ್ತು ಅವುಗಳನ್ನು ಜಾರಿಗೆ ಕೊಡುವಾಗ. ಬೆಂಗಳೂರು ಪಟ್ಟಣದಲ್ಲಿ, ಉದಾಹರಣೆಗೆ ಹೇಳಬೇಕು ಎಂದರೆ ಕಬ್ಬನ್‌ಪೇಟೆ ಇಂಥ ಕಡೆ ಹೋದರೆ ಗಲ್ಲಗಳಲ್ಲಿರುವ ಮನೆಗಳಲ್ಲಿ ಬಹಳ ಜನರು ಹಸುಗಳನ್ನು ಸಾಕಿ ಹಾಲು ಮಾರಿ ಜೀವನ ಮಾಡುತ್ತಾರೆ. ಬೆಂಗಳೂರಿನಲ್ಲಿ ಅನೇಕ ಜನರು ಈ ಹಾಲು ಮಾರಾಟದಿಂದ ಜೀವನ ಮಾಡುವುದನ್ನು ನಾವು ನೋಡಬಹುದು. ಈಚೆಗೆ ಸರ್ಕಾರದವರು ಮುಂದೆ ಒಂದು ಹಾಲಿನ ಕೇಂದ್ರ ಮಾಡಬೇಕು ಬೆಂಗಳೂರಿನ ಸುತ್ತಮುತ್ತಲೂ ಎಂದು ಒಂದು ಬೃಹತ್ ಯೋಜನೆ ಇದೆ. ಮೈಸೂರಿನಲ್ಲಿಯೂ ಇಂಥದೇ ಒಂದು ಯೋಜನೆ ಇದೆ. ನಗರವಲ್ಲಿ ವಾಸಮಾಡುವುದಕ್ಕೆ ಜನರಿಗೆ ಒಳ್ಳೆಯ ಹಾಲನ್ನು ಸಾಕಷ್ಟು ಒದಗಿಸಬೇಕಾದ್ದು ಕೂಡ ಸರ್ಕಾರದವರ ಒಂದು ಕರ್ತವ್ಯವೇ ಆಗಿದೆ. ಅಂದ ಮಾತ್ರಕ್ಕೆ ಇವತ್ತು ಈ ಡೈರಿ ಫಾರಂ ಮಾಡುವ ಒಂದು ಉದ್ದೇಶದಿಂದ ಬೆಂಗಳೂರಿನಂಥ ಪಟ್ಟಣದಲ್ಲಿರತಕ್ಕಂಥ ಹಸು ಮತ್ತು ಎಮ್ಮೆ ಸಾಕತಕ್ಕ ಜನರು ಏನಿದ್ದಾರೆ ಅವರು ಈ ಕಾನೂನು ಪ್ರಕಾರ ಕ್ರೂರವಾದ ಶಿಕ್ಷೆಗೆ ಗುರಿಯಾಗುತ್ತಾರೆ. ಶ್ರೀಮಾನ್ ದೇವಯ್ಯ ನವರು ಇವನ್ನು ಗಮನಿಸಿದರೋ ಇಲ್ಲವೋ? ಬೆಂಗಳೂರು ನಗರದ ಪ್ರಜೆಯಾಗಿ, ಕಾರ್ಪೊರೇಟರಾಗಿ, ಪ್ರತಿನಿಧಿಯಾಗಿ ಈ ಮಸೂದೆ ಸ್ವಾಗತಾರ್ಹವಾದುದು ಎಂದು ಅವರು ಹೇಳಿಬಿಟ್ಟರು. ಆದರೆ ಈ ಮಸೂದೆ ಇನ್ನು ಆರು ತಿಂಗಳಲ್ಲಿ ಜಾರಿಗೆ ಬರುತ್ತದೆ. ಆಗ ಜಾರಿಗೆ ಬರುವ ಪ್ರತಿಯೊಂದು ಸ್ಥಳದಲ್ಲಿಯೂ ಪರಿಶೀಲನೆ ಮಾಡಿ ಎಷ್ಟು ಎಮ್ಮೆಗಳಿವೆ, ಎಷ್ಟು ಹಸುಗಳಿವೆ, ಯಾವ ಸ್ಥಿತಿಯಲ್ಲಿ ಮಲಗುತ್ತವೆ, ಎಲ್ಲಿ ಕಟ್ಟುತ್ತಾರೆ, ಹೇಗೆ ಕರೆಯುತ್ತಾರೆ, ಇವೆಲ್ಲವನ್ನೂ ನೋಡುವುದಕ್ಕೆ ಹೋದಾಗ

(ಶ್ರೀ ಎಸ್. ಗೋಪಾಲಗೌಡ)

ಬೆಂಗಳೂರಿನಿಂದ ಎಲ್ಲ ಹಸುಗಳು ಮತ್ತು ಎಮ್ಮೆಗಳೂ ಹೊರಟು ಬೇರೆ ಕಡೆಗೆ ಹೋಗುವ ಪರಿಸ್ಥಿತಿ ಬಂದಾಗ ಬೆಂಗಳೂರಿನ ಈ ಒಂದು ವೃತ್ತಿಯನ್ನು ಅವಲಂಬಿಸಿ ಜೀವಿಸತಕ್ಕ ಜನರ ಆರ್ಥಿಕ ಪರಿಸ್ಥಿತಿ ಏನಾದೀತು; ಅವರ ಮೇರೆ ಏನು ಪರಿಣಾಮವಾಗಬಹುದೀತು ಎನ್ನುವುದನ್ನು ಶ್ರೀಮಾನ್ ದೇವಯ್ಯನವರು ಯೋಚನೆ ಮಾಡಿಲ್ಲವೆಂದು ಕಾಣುತ್ತದೆ. ದನಗಳನ್ನು ಇಟ್ಟುಕೊಳ್ಳುವುದಕ್ಕೆ ಲೈಸೆನ್ಸ್ ತೆಗೆದು ಕೊಳ್ಳುವುದು ಮಾತ್ರವಲ್ಲ. ಒಂದು ದನ ಹೆಚ್ಚಿದರೆ, ಒಂದು ಲೀಟರ್ ಹಾಲು ಜಾಸ್ತಿ ಕರೆದರೆ ಒಂದು ಸಾವಿರ ರೂಪಾಯಿ ಜುಲ್ಮಾನೆಯನ್ನು ಕೊಡಬೇಕು. ಯಾರು ಲೈಸೆನ್ಸ್ ಕೊಡುವರು, ಎಲ್ಲಿಗೆ ಅರ್ಜಿಲು ಮಾಡಬೇಕು. ಲೈಸೆನ್ಸ್ ಫೀ ಎಷ್ಟು ಎನ್ನುವುದಲ್ಲ ಈ ಮಸೂದೆಯಲ್ಲಿಲ್ಲ, ಈ ಒಂದು ಕಾನೂನನ್ನು ಬಹಳ ಸರಳವಾದ ರೀತಿಯಲ್ಲಿ, ಗೂಢಾರ್ಥದಲ್ಲಿ ಬರೆದಿದ್ದಾರೆ. ಮುಂದೆ ಯಾವ ರೀತಿಯಲ್ಲಿ ತೊಡಕಾಗುತ್ತದೆ ಎನ್ನುವುದನ್ನು ತಾವು ಸ್ವಲ್ಪ ವಿಚಾರ ಮಾಡಬೇಕು.

ಭಾರತ ಸರ್ಕಾರದವರು ಅಭಿಪ್ರಾಯ ಪಡುತ್ತಾರೆ, ನಮ್ಮ ಅನಿಮಲ್ ಹಸ್ಬೆಂಡ್ರಿ ಮತ್ತು ಅಗ್ರಿಕಲ್ಚರಲ್ ಇಲಾಖೆಯವರು ಅಶ್ರಯ ಪಟ್ಟಿದ್ದಾರೆ, ಸರ್ಕಾರದವರೂ ಹಾಗೆಯೇ ಅಭಿಪ್ರಾಯ ಪಡುತ್ತಾರೆ ಎನ್ನುವುದರಲ್ಲಿ ಏನೂ ವಿವಾದವಿಲ್ಲ. ಎಲ್ಲರೂ ಆ ರೀತಿ ಅಭಿಪ್ರಾಯ ಪಡಬೇಕಾದ್ದೇ ಮುಖ್ಯವಾಗಿ ಆರ್ಥಿಕವಾಗಿ ಇವತ್ತು ಒಬ್ಬ ಪೋಲಿಸ್ ಕಾನ್‌ಸ್ಟೇಬರ್ ಸ್ವಲ್ಪ ಜಾಗ ಸಿಕ್ಕಿದ್ದರೆ ಮನೆಯಲ್ಲಿ ಒಂದು ಹಸು ಕಟ್ಟಿರುತ್ತಾನೆ. ತನ್ನ ಮಕ್ಕಳು, ಹೆಂಡತಿ ಇವರ ಪಾಲನೆಗಾಗಿ, ಅವರ ಜೀವನ ಹೊರೆಯುವುದಕ್ಕಾಗಿ. ಎಷ್ಟೋ ಜನ ವಿಧವೆಯರು ಇದ್ದಾರೆ. ಅವರು ತಮ್ಮ ಜೀವನವನ್ನು ಅವರು ಇರುವ ಜಾಗದಲ್ಲಿ ಒಂದು ಎಮ್ಮೆ ಅಥವಾ ಹಸುವನ್ನು ಕಟ್ಟಿಕೊಂಡ ಜೀವನ ಮಾಡುತ್ತಾರೆ. ಎಷ್ಟೋ ಸಂಸಾರಗಳು ತಮ್ಮ ದಿಡಿಮೆ ಸಾಕಾಗದೆ ಹಾಲು ಕರೆದು ಮಾರಾಟ ಮಾಡಿ ಆ ಜೀವನವನ್ನು ಅವಲಂಬಿಸಿದ್ದಾರೆ. ಹೀಗೆ ನಾವು ನೋಡುವುದಾದರೆ ನೂರಾರು ಸಂಸಾರಗಳು ಎಮ್ಮೆ ಹಸುಗಳನ್ನು ಸಾಕಿ, ಹಾಲು ಕರೆದು ಅದನ್ನು ಮಾರಾಟ ಮಾಡಿ ಬಂದ ಹಣದಿಂದ ಜೀವನ ಮಾಡತಕ್ಕ ದುಸ್ಥಿತಿಯನ್ನು ನೋಡಬಹುದು. ಆಧುನಿಕ ದೃಷ್ಟಿಯಿಂದ ಆರೇ ಕಾರ್ಪೋರೇಶನಿಗಳಂಥ, ಕಾರ್ಪೋರೇಶನಿಗಳಾಗಬೇಕು, ಡೈರಿಗಳಾಗಬೇಕು, ಸೀಸೆಗಳಲ್ಲಿ ಅಲ್ಲಿಂದ ಹಾಲು ಬರಬೇಕು, ಮುಂದುವರಿದಂಥ ಸ್ವಿಟ್ಜರ್‌ಲೆಂಡ್ ದೇಶದಲ್ಲಿರುವಂತೆ ಮನೆಯಲ್ಲಿ ಎಷ್ಟು ಜನರಿದ್ದಾರೋ ಅಷ್ಟು ಲೀಟರ್ ಹಾಲನ್ನು ಕಿಟಕಿಯಲ್ಲಿ ಇಡಬೇಕು, ನಾವು ಆ ಹಾಲನ್ನು ಕುಡಿಯಬೇಕು, ಅವೆಲ್ಲ ದೊಡ್ಡ ಅಭಿಪ್ರಾಯಗಳೇ. ಆದರೆ ಗಂಜಿಗೆ ಉಪ್ಪಿಲ್ಲದ ಜನರ ಮುಂದೆ ದೊಡ್ಡ ಕ್ಷೀರ ಬೋಧೆ ಮಾಡುವುದಕ್ಕೆ ಹೋದರೆ ನಮ್ಮನ್ನು ತಿಳುವಳಿಕೆ ಇಲ್ಲದವರು ಎಂದು ಹೇಳುತ್ತಾರೆ, ಹುಚ್ಚರು ಎಂದು ಕರೆಯದೆ ಇದ್ದರೂ. ಈ ಸ್ಥಿತಿಯಲ್ಲಿ ಈ ಸರ್ಕಾರದವರು ಈ ಮಸೂದೆಯನ್ನು ಇಷ್ಟು ಅವಸರವಾಗಿ ತರುವುದಕ್ಕೆ ಕಾರಣ ನನಗೆ ಗೊತ್ತಾದ ಮಟ್ಟಿಗೆ ಸರ್ಕಾರದವರ ಡೈರಿಫಾರಂ ಪ್ರಯತ್ನದ ಪರಿಣಾಮವೆಂದು ಕಾಣುತ್ತದೆ. ತಕ್ಷಣ ಎಲ್ಲ ನಗರಗಳಿಗೂ ಈ ಕಾನೂನು ಅನ್ವಯಿಸುತ್ತದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಹಾಗೆ ಜಾರಿಗೆ ಕೊಡುವುದಕ್ಕೆ ತಕ್ಕಷ್ಟು ಅನುಕೂಲಗಳೂ ಸರ್ಕಾರಕ್ಕೆ ಇಲ್ಲ ಎನ್ನುವುದು ವೇದ್ಯವಾಗಿದೆ. ಇದನ್ನು ಬೆಂಗಳೂರಿನಲ್ಲಿ ಬಹುಶಃ ಪ್ರಾರಂಭ ಮಾಡಬಹುದು ಎಂದು ಕಾಣುತ್ತದೆ. ಈಗ ಬೆಂಗಳೂರಿನಲ್ಲಿರುವ ಸಹಸ್ರಾರು ಸಂಸಾರಗಳು ಶಿಕ್ಷೆಗೆ ಗುರಿಯಾಗಬೇಕಾಗುತ್ತವೆ ಅಥವಾ ಅವರಿಗೆ ಬಹಳ ದೊಡ್ಡ ಪೆಟ್ಟು ಇದರಿಂದ ಬೀಳುತ್ತದೆ. ಆದುದರಿಂದ ನಾನು ಈ ಕ್ಲಾಜುಗಳ ಬಗ್ಗೆ ಹೆಚ್ಚಾಗಿ ಹೇಳುವುದಿಲ್ಲ ಏಕೆಂದರೆ ಮಾನ್ಯ ಮುಕ್ಕಣ್ಣಪ್ಪನವರು ಸಾಕಷ್ಟು ವಿವರವಾಗಿ ಎಲ್ಲ ಕ್ಲಾಜುಗಳನ್ನೂ ಹೇಳಿದ್ದಾರೆ. ಒಂದು ಸಾವಿರ ರೂಪಾಯಿವರೆಗೂ ದಂಡ ಕೂಡಬೇಕು ಎಂದು ಇದರಲ್ಲಿ ಹೇಳಿದ್ದಾರೆ. ಜಾಗ ಎಷ್ಟಿರಬೇಕು, ಎಷ್ಟು ಪಶುಗಳಿರಬೇಕು, ಎಷ್ಟು ಹಾಲು ಕರೆಯಬೇಕು, ಯಾರಿಗೆ ಲೈಸೆನ್ಸ್ ಕೊಡಬೇಕು, ಯಾರಿಗೆ ಅರ್ಜಿ ಹಾಕಬೇಕು ಎಂದು ಯಾವುದೂ ಇದರಲ್ಲಿ ಇಲ್ಲ. ಸ್ಪಷ್ಟವಾಗಿ ಏನು ಹೇಳುತ್ತಾರೆಂದರೆ ಈ ಒಂದು ರೀತಿಯಲ್ಲಿ ನಾವು ನಿಂದನೆಗೆ ಒಳಪಡಿಸಬೇಕು, ಆ ಪ್ರಕಾರವಾಗಿ ಜಾನುವಾರುಗಳನ್ನು ಸಾಕಬೇಕು ಎನ್ನುವ ಆಶಯವನ್ನು ವ್ಯಕ್ತಪಡಿಸಿದ್ದಾರೆ ಈ ಮಸೂದೆಯಲ್ಲಿ. ಇದು ಹೀಗೆಯೇ ಪಾಸಾಗುವುದಾದರೆ ಕೆಟ್ಟ ಮಸೂದೆಯಾಗುತ್ತದೆ ಮತ್ತು ರೂರ್ಸ್ ಮಾಡುವಾಗ ಯಾರಿಗೆ ಅಧಿಕಾರ ಕೊಡಬೇಕು ಇತ್ಯಾದಿ ಎಲ್ಲವನ್ನೂ ಅದರಲ್ಲಿ ಅಳವಡಿಸಿಲ್ಲವಾದ್ದರಿಂದ ಜನತೆಗೆ ತಿಳಿಯುವುದು ಕಷ್ಟವಾಗುತ್ತದೆ ಗೋವುಗಳನ್ನು ಇಟ್ಟಿರುವವರು, ಎಮ್ಮೆ ಇತ್ಯಾದಿ ಇಟ್ಟುಕೊಂಡು ಜಾನುವಾರುಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಾ ಇರತಕ್ಕವರು ಚಳುವಳಿಯನ್ನೂ ಅಥವಾ ಏನನ್ನೋ ಮಾಡಿ ಕಾನೂನಿನ ವಿರೋಧ ಹೋರಾಟ ಮಾಡುವುದಕ್ಕೆ ಶುರು ಮಾಡಿದ ಮೇಲೆ ಬಹುಶಃ ಅದನ್ನು ಇದನ್ನು ಹಿಡಿ ಇದರಲ್ಲಿ ಏನೇನು ಲೋಪದೋಷವಿದೆ ಯಾರು ಯಾರಿಗೆ ಏನೇನು ತೊಂದರೆಯಾಗುತ್ತದೆ ಎಂದು ತಿಳಿದುಕೊಳ್ಳಬೇಕಾದ ಪ್ರಮೇಯ ಬರಬಹುದು ಎಂದು ಕಾಣುತ್ತದೆ.

4-30 P.M.

ಅದ್ದರಿಂದ ನಮ್ಮ ಸಚಿವರಲ್ಲಿ ಮನವಿ ಬೇಕೆಂಬ ಆಶೆಯನ್ನು ವ್ಯಕ್ತಪಡಿಸಿದ್ದೀರಿ ಈ ಕಾಣುತ್ತದೆ. ಈಗ ಸದ್ಯಕ್ಕೆ ಆ ಒಂದು ಎಷ್ಟೆಷ್ಟು ಜಾನುವಾರುಗಳು ಇವೆ, ಕೇವಲ ಕೊಂಡು ಹೆಚ್ಚು ಲಾಭ ಪಡೆಯುತ್ತಾ, ಜೀವನೋಪಾಯಕ್ಕಾಗಿ ಎಮ್ಮೆ ತಕ್ಕ ಜನರ ಸಂಖ್ಯೆ ಎಷ್ಟು ಉದ್ಯಮವನ್ನು ಸಾರೋದ್ಧಾರವಾಗಿ ಆ ರೀತಿ ಮಾಡುತ್ತಾ ಇದ್ದಾರೆ ಅಂತವರಿಗೆ ದನಕರುಗಳನ್ನು ಯಲ್ಲಿ ಬಿಡಬಾರದು, ಹಾಲಿನ ಎಂದು ಹೇಳಿ ಒಟ್ಟು ಕೊಟ್ಟಿಗೆಯಲ್ಲಿ ಎಂದು ಹೇಳುವುದನ್ನು ಅದನ್ನು ಮನೆಗೆ ಬಳೆದರೆ ಹಾಕುವುದು. ಮೂರನೆಯದು ಕೊಳ್ಳಬೇಕು. ವರ್ಷವಾದರೂ ಎಮ್ಮೆ ಲೈಸೆನ್ಸ್‌ಗೆ ಹಾಕಿಕೊಂಡ

ಮಾಡಿಕೊಳ್ಳುವುದೇನೆಂದರೆ ಈ ಮನವಿಯನ್ನು ತರುವುದು ಅಷ್ಟೇ ಸಾಕು ಎಂದು ಸರ್ವೆ ಕೆಲಸವನ್ನು ಆರಂಭ ಮಾಡಿ ಯಾವ ನಗರಗಳಲ್ಲಿ ಇದನ್ನು ಒಂದು ಉದ್ಯಮವಾಗಿ ಇಟ್ಟು ವ್ಯಾಪಾರವನ್ನಾಗಿ ಮಾಡಿಕೊಂಡಿರುತಕ್ಕ ಜನರ ಸಂಖ್ಯೆ ಎಷ್ಟು ಜಾನುವಾರುಗಳನ್ನು ಕಟ್ಟಿಕೊಂಡು ಜೀವನ ಮಾಡ ಇದನ್ನೆಲ್ಲಾ ಕಂಡುಹಿಡಿದು ನಂತರ ಯಾರು ಯಾರು ಕೇವಲ ವ್ಯಾಪಾರ ಲಾಭಕ್ಕಾಗಿ ಮತ್ತು ಹಳ್ಳಿಯವರ ಕಷ್ಟಸುಖವನ್ನು ಲಕ್ಷಕ್ಕೆ ತಗೆದುಕೊಳ್ಳದೇ ಶಮ್ಸ್ ಓಂದು ದಿ ಕಾಸ್ಟ್ ಆಫ್ ಅದರ್ಸ್ ಅಂತ ಎನು ಹೇಳುತ್ತಾರೆ ಅಂತವರಿಗೆ ಮೊದಲು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು, ನಮ್ಮ ಸರಿಯಾದ ಹಣೊಟಯಲ್ಲಿ ಇಟ್ಟುಕೊಳ್ಳಬೇಕು ಇತರರಿಗೆ ತೊಂದರೆಯಾಗತಕ್ಕ ರೀತಿ ಬಿಡಬಾರದು, ಅದ್ದರಿಂದ ಎಷ್ಟು ಜಾನುವಾರುಗಳು ಇವೆ ಎಂಬುದು ಡಿಕ್ಲೇರ್ ಮಾಡಿ ಯಾರು ವ್ಯಾಪಾರ ಮಾಡುತ್ತಾರೆ ಆ ಬಗ್ಗೆ ಒಂದು ಲೈಸೆನ್ಸ್‌ನ್ನು ಅವರಿಗೆ ಕೊಡಬಹುದು. ಇಂಥಾದ್ದೊಂದು ಯಲ್ಲಿ ಕಟ್ಟಬೇಕು, ಹೀಗೆಯೇ ಇರಬೇಕೆಂದು ನಿಯಂತ್ರಣ ಮಾಡುವುದಾದರೆ ಒಂದು ಬಹಳ ಅಪಾಯವನ್ನು ನಿಮ್ಮ ತಲೆಯ ಮೇಲೆ ಹಾಕಿಕೊಳ್ಳುವುದಕ್ಕೆ ಹೊಣಟಂತಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಎಚ್ಚರಿಕೆ ಕೊಡುತ್ತೇನೆ. ಇನ್ನು ಹೆಚ್ಚು ವಿವರವಾಗಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.

ಶ್ರೀ ವಿ. ಎಂ. ದೇಪ್ (ಗುಬ್ಬಿ).—ನನಗೆ ಏನು ಅನಿಸುತ್ತದೆ ಎಂದರೆ, ನಮ್ಮಲ್ಲಿ ಅನಾಥ ಜಾನುವಾರುಗಳು ಬೇಕಾದಷ್ಟು ಇವೆ. ಆರೋಗ್ಯದೃಷ್ಟಿಯಿಂದ ದನಗಳು ಒಳ್ಳೆಯ ವಾತಾವರಣ ದಲ್ಲಿ ಓಡಾಡುವುದು ಒಳ್ಳೆಯದು ಆ ದೃಷ್ಟಿಯಿಂದ ಅವಕ್ಕೆ ಒಂದು ಕಾನೂನನ್ನು ತಗೆದುಕೊಂಡು ಬಂದಿದ್ದೇವೆ ಎಂದು ಹೇಳಿ ಒಟ್ಟು ಅಭಿಪ್ರಾಯ ಹೇಳುವುದಾದರೂ ಒಂದು ವಿಷಯವನ್ನು ನಾವು ಯೋಚನೆ ಮಾಡಬೇಕು. ಬೆಂಗಳೂರಿನಂತಹ ಸಿಟಿಗಳಲ್ಲಿ ಈ ದನಗಳು ಮಾಲೀಕರಿಲ್ಲದೇ ಬೀದಿಗಳಲ್ಲಿ ಓಡಾಡುತ್ತಾ ಇರುವುದು ಒಳ್ಳೆಯದಲ್ಲ ಅದರಿಂದ ಜನಗಳ ಆರೋಗ್ಯಕ್ಕೂ ಕೂಡ ಧಕ್ಕೆ ಬರುತ್ತದೆ ಎಂದ ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೂ ಕೂಡ ಈ ದನಗಳ ಸಗಣಿ ಏನಿರುತ್ತದೆ ಅದನ್ನು ಮನೆಗೆ ಬಳೆದರೆ ಅದು ಒಂದು ತರಹ ಕ್ರಿಮಿನಾಶಕವಾಗಿ ಕೆಲಸ ಮಾಡುತ್ತದೆ ಎಂದು ಕೇಳಿದ್ದೇನೆ. ಅದಕ್ಕೆ ಕಾರಣವೇನೋ ನನಗೆ ಸರಿಯಾಗಿ ಗೊತಿಲ್ಲ. ಈ ದನಗಳು ದಾರಿಯ ಮಧ್ಯದಲ್ಲಿ ನಿಂತುಕೊಂಡು ಜನರು ಮತ್ತು ವಾಹನಗಳ ಸಂಚಾರ ಜಾಸ್ತಿಯಿರುವಕಡೆ ಬಹಳ ತೊಂದರೆ ಕೊಂಡುತ್ತವೆ ಮತ್ತು ಮೇಜರ್ ಆಕ್ಸಿಡೆಂಟ್ಸ್‌ಕೂಡ ಅನೇಕಸಾರಿ ಆಗಿವೆ. ಅವುಗಳಿಂದ ಟ್ರಾಫಿಕ್ ಹೋಲ್ಡ್ ಅಪ್ ಆಗುತ್ತದೆ. ಆ ದೃಷ್ಟಿಯಿಂದ ಈ ಕಾನೂನು ಬೇಕೇ ಬೇಕು. ಆದರೆ ಇಲ್ಲಿ ಕೊಟ್ಟಿರುವ ಕಾರಣಗಳು ಸರಿಯಾಗಿಲ್ಲ. ಅಂದರೆ ಕೊಟ್ಟಿರುವ "Object and reason" ಸರಿಯಾಗಿಲ್ಲ. ಇದರಿಂದ ಸಾಮಾನ್ಯ ಜನತ ಜೀವನಕ್ಕೆ ಬಹಳ ಕೆಟ್ಟದ್ದು ಆಗುತ್ತದೆ, ಎಲ್ಲವನ್ನೂ ಪೂರ್ತಿಯಾಗಿ ಪರ್ಯಾಲೋಚನೆ ಮಾಡಿ ಈ ಬಿಲ್ಲನ್ನು ತೆಗೆದುಕೊಂಡು ಬಂದಿಲ್ಲ ಎಂದು ನಾನು ಹೇಳುತ್ತೇನೆ. ಶ್ರೀಮಾನ್ ಗೋಪಾಲಗೌಡರು ಒಬ್ಬ ನಾಹೇಟೆ ಮುಂತಾದ ಕಡೆಗಳಲ್ಲಿ ಬಡವರು ಇದ್ದಾರೆ, ಇದನ್ನು ಅವರಿಗೆ ಅನ್ಯಾಯ ಮಾಡಿದರೆ ಅವರ ಜೀವನಕ್ಕೆ ಗತಿ ಏನು ? ಬಹಳ ದಾರುಣವಾದ ಪರಿಸ್ಥಿತಿ ಬರುವುದಲ್ಲದೇ ಅವರಿಗೆ ಇದರಿಂದ ಬಹಳ ಕಷ್ಟವಾಗುತ್ತದೆ ಅದ್ದರಿಂದ ಇದು ಹೇಗೆ ಇದೆಯೋ ಹಾಗೆಯೇ ಇದನ್ನು ಜಾರಿ ಮಾಡುವುದು ಸೂಕ್ತವಲ್ಲ ಎಂದು ನಾನು ಹೇಳುತ್ತೇನೆ. ಇಲ್ಲಿ ದನಗಳ ಆರೋಗ್ಯ ದೃಷ್ಟಿಯನ್ನೂ ನಮ್ಮ ಗಮನಕ್ಕೆ ತೆಗೆದುಕೊಂಡು ಹ್ಯೂಮಿಂಗ್ ದಿ ಕ್ಯಾಟಲ್ ಎಂಬ ವಿಷಯವನ್ನೂ ಸಹ ಸೇರಿಸಿದ್ದಾರೆ. ದನಗಳಿಗೆ ಸ್ವಲ್ಪ ಕಾಲು ಆಡಬೇಕು, ಅವು ಆಡ್ಯಾಡಬೇಕು ಇಲ್ಲದೇ ಇದ್ದರೆ ದನಕರುಗಳಿಗೆ ರೋಗ ಬರುತ್ತದೆ. ಯಾರೂ ವಾರನುದಾರರು ಇಲ್ಲದೇ ಇರತಕ್ಕ ದನಗಳು ಇದ್ದರೆ ಅವುಗಳನ್ನು ಕಾನ್‌ಫಿಸ್ಕೇಟ್ ಮಾಡಿಕೊಳ್ಳುವುದು ಒಂದನೆಯ ಮಾರ್ಗ ಎಂದನೆಯದು ವಾರಸುದಾರರು ಇದ್ದು ಅವುಗಳನ್ನು ಸರಿಯಾಗಿ ನೋಡಿಕೊಳ್ಳದೇ ಇದ್ದ ಪಕ್ಷದಲ್ಲಿ ಅವರಿಗೆ ದಂಡ ಹಾಕುವುದು. ಮೂರನೆಯದು ತಾವೇ ಹೇಳಿದ್ದೀರಿ 4ನೇ ಕ್ಲಾಸ್‌ನಲ್ಲಿರುವಂತ ಲೈಸೆನ್ಸ್ ತೆಗೆದು ಕೊಳ್ಳಬೇಕು. ಲೈಸೆನ್ಸ್‌ಗೆ ಅಷ್ಟೆ ಮಾಡಿದವರು ಲೈಸೆನ್ಸ್ ಕೊಡುವ ಅಧಿಕಾರಿ ಎಷ್ಟು ಅದ್ದರಿಂದ ಇಷ್ಟು ದಿವಸದೊಳಗೇ ಲೈಸೆನ್ಸ್ ಕೊಡಬೇಕು ಲೈಸೆನ್ಸ್ ಕೊಡದಿದ್ದರೆ ಲೈಸೆನ್ಸ್‌ಗೆ ಹಾಕಿಕೊಂಡ ಮನುಷ್ಯ ತನಗೆ ಲೈಸೆನ್ಸ್ ಇಲ್ಲ ಎಂದು ತಿಳಿದುಕೊಂಡು ದನ

(ಶ್ರೀ ಎ. ಎಂ. ಜೋಷಿ)

ಕಷ್ಟವಹುದು ಎಂದು ಮಾಡಬೇಕು. ಒಬ್ಬ ಲೀಡರ್ ಎಂದು ಇದ್ದಮೇಲೆ ಅವನು ಹೇಳಿದ ಹಾಗೆ ಕಾನೂನು ಬದ್ಧವಾಗಿ ಅವನು ಹೇಳಿದ್ದನ್ನು ಪಾಲೋ ಮಾಡಬೇಕು, ಹಾಗೆ ಮಾಡದೇ ಇದ್ದ ಮೇಲೆ ಅವನನ್ನು ಲೀಡರ್ ಎಂದು ಏಕೆ ಹೇಳಿಕೊಳ್ಳಬೇಕು? ಆದ್ದರಿಂದ ಈ ಕಾನೂನಿನ ವಿಷಯದಲ್ಲೂ ಸಹ ನಿಮಗೆ ಒಂದು ಹೊಣೆಗಾರಿಕೆ ಇರಬೇಕು. ಈಗಿನ ಕಾಂದಲ್ಲಿ ಏನಾಗಿದೆ ಎಂದರೆ ಹಳ್ಳಿಕಾರು ಅಮೃತ ಮಹಲ್ ಇವುಗಳಿಂದ ಉತ್ಪನ್ನವಾದ ಥಳಿಗಳಿಂದ. ಮೊದಲು 6 ಲೀಟರ್ ಕರೆಯುವುದೂ ಕೂಡ ದುಸ್ಸಾಧ್ಯವಾಗಿತ್ತು ಅಂತಹದು ಈಗ ಒಳ್ಳೆಥಳಿಗಳಿಂದ 50 ಪೌಂಡ್‌ಗಳವರೆಗೂ ಹಾಲನ್ನು ಕರೆಯುತ್ತಾರೆ. ನಾನೀಗ ಬೊಂಬಾಯಿ, ಮದ್ರಾಸ್ ಮತ್ತು ಕಲ್ಕತ್ತಾ ಇಂಥ ದೊಡ್ಡ ನಗರಗಳ ವಿಚಾರವನ್ನು ಹೇಳುತ್ತಿಲ್ಲ. ಈ ಪಟ್ಟಣಗಳೆಲ್ಲ ಕೇವಲ ಪೂರ್ವ ಪಶ್ಚಿಮ ಮಾತ್ರ ಬೇಳೆಯಲು ಅವಕಾಶವಿದ್ದಿದರೆ ನಮ್ಮ ಬೆಂಗಳೂರು ನುತ್ತಲೂ ಬೇಳೆಯುವ ಅವಕಾಶ ಇದೆ. ಸಾಮಾನ್ಯವಾಗಿ ನಮ್ಮ ಮೈಸೂರು ದೇಶದಲ್ಲಿರತಕ್ಕ ಪಟ್ಟಣಗಳಿಗೆಲ್ಲಾ ಇಂಥ ಒಂದು ಅವಕಾಶ ಇರುತ್ತದೆ. ಬೊಂಬಾಯಿ, ಮದ್ರಾಸುಗಳಂತೆ ತೀರವೆಲ್ಲೇ ಇಕ್ಕಟ್ಟಾಗಿ ಹೊರಡ ಬೇಕಾಗಿಲ್ಲ. ಆದುದರಿಂದ ಮುಂದೆ ದನಗಳು ಬರಡಾದಾಗ ಇವುಗಳಿಗೆ ಪೋಷಣೆ ಸಾಗಿಸಲು ಒಂದು ಅವಕಾಶ ಇರಬೇಕು. ಅದನ್ನು ಸರ್ಕಾರದವರೇ ಮಾಡಬೇಕು. ಇದಕ್ಕಾಗಿ ಸರ್ಕಾರ ಗೋಮಾಳ ಜಮೀನನ್ನು ಜ್ಞಾಪ್ತಿ ಬಡವುದು ಒಳ್ಳೆಯದು. ಇದಕ್ಕೆ ಸರಿಯಾದ ಒಂದು ವ್ಯವಸ್ಥೆ ಮಾಡಿದಿದರೆ ಮುಂದೆ ಬಹಳ ತೊಂದರೆ ಆಗುತ್ತದೆ. ಇನ್ನು ಹೆನಾಲ್ಟ್ ಒಂದು ಸಾವಿರ ರೂಪಾಯಿಗಳ ದಂಡ ಎಂತ ಹೇಳಿದ್ದಾರೆ. ಇದು ಖಂಡಿತ ಸರಿಯಾದ್ದಲ್ಲ. ಈ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ನನ್ನು ಹಳ್ಳಿಗಳ ಜನರಿಗೆ ಧಾರಾಳವಾಗಿ ಒದಗಿಸುತ್ತಿಲ್ಲ. ಪಟ್ಟಣದ confiscated ಹಸುಗಳನ್ನು ಹಳ್ಳಿಯವರಿಗೆ ಕೊಟ್ಟುಬಡುವ ವ್ಯವಸ್ಥೆ ಮಾಡಿದರೆ ಸಾಕು. ಆದುದರಿಂದ ಈ ದಂಡಾ ಹಾಕತಕ್ಕದನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಕ್ಲಾಜುಗಳಲ್ಲಿ ಸುಮ್ಮನೆ ಲಂಬಮಾಡಿ ಬೆಳೆಸಿದ್ದಾರೆ ಇಂಥ ಕೆಲವು ಕ್ಲಾಜುಗಳನ್ನು ಬದಲಾವಣೆಮಾಡಿ ಸಂಕ್ಷಿಪ್ತವಾಗಿಡುವುದು ಒಳ್ಳೆಯದೆಂದು ಹೇಳುತ್ತೇನೆ. ಹೀಗೆ ಇಲ್ಲಿ ಕೆಲವು ಪ್ರೊಜಿಯಾಲಜಿಯನ್ನು ಬದಲಾಯಿಸುವುದು ಉತ್ತಮ ಎಂದು ಹೇಳುತ್ತೇನೆ. ಸರ್ಕಾರದವರು ಈ ಕಾರಣವನ್ನು ಬಹಳ ಜವಾಬ್ದಾರಿಯಿಂದ ಮಾಡಬೇಕಾಗಿದೆ. ಅಂಕುಶವಿಲ್ಲದ ಕಾನೂನುಗಳನ್ನು ಮಾಡುವುದು ಬೇಡ. ಈ ಮಸೂದೆಯಲ್ಲಿ ಅನೇಕ ರೋಪಡೋಷಗಳಿರುವುದರಿಂದ ಇದನ್ನು ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸ ಬೇಕೆಂದು ಹೇಳಿ, ನನಗೆ ಈ ನಾಲ್ಕು ಮಾತುಗಳನ್ನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ಕುಳಿತು ಕೊಳ್ಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಈ ಸಭೆಯವರು ಈ ಮಸೂದೆಗೆ ಕೊಟ್ಟಿರತಕ್ಕ ಸ್ವಾಗತಕ್ಕಾಗಿ ನಾನು ಅವರನ್ನು ವಂದಿಸುತ್ತೇನೆ. ಈ ಮಸೂದೆಯ ಬಗ್ಗೆ ಅನೇಕ ಮಾನ್ಯ ಸದಸ್ಯರು ಬಹಳ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ನಾನಿಲ್ಲಿ ಈಗ ಒಂದು ವಿಚಾರವನ್ನು ಬಹಳ ಸ್ಪಷ್ಟವಾಗಿ ಹೇಳಬೇಕೆಂದಿದ್ದೇನೆ. ಈ ಕಾನೂನು ಇಡೀ ದೇಶಕ್ಕೆಲ್ಲಾ ವ್ಯಾಪಕವಾದುದ್ದಲ್ಲ. ಇದು ಪಟ್ಟಣಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದಾಗ್ಗೂ ಇದು ಎಲ್ಲ ಪಟ್ಟಣಗಳಿಗೂ ಅನ್ವಯಿಸುವುದಿಲ್ಲ. ಇದು ಕೆಲವು ಪಟ್ಟಣಗಳ ಕೆಲವು ಭಾಗಗಳಿಗೆ ಮಾತ್ರ ಇದು ಅನ್ವಯಿಸತಕ್ಕದ್ದಾಗಿದೆ. ಇದು ಒಂದು ಇಕ್ಕಟ್ಟಿನ ಸಮಸ್ಯೆಗೆ ತಗಲುವಂಥ ಕಾನೂನು. ಬೆಂಗಳೂರಿನ ಕೆಲವು ಭಾಗಗಳಲ್ಲಿ ಈ ತೊಂದರೆಯಿಂದ ಜನಜೀವನ ನಿರಾತಂಕವಾಗಿ ನಡೆಯಲು ಸಾಧ್ಯವೇ ಇಲ್ಲ. ಅಂಥ ಭಾಗದಲ್ಲಿ ಪಶುಪಾಲನೆ ಮಾಡತಕ್ಕವರ ಮೇಲೆ ಯಾವ ಒಂದು ವಿಧವಾದ ಹತೋಟಿಯೂ ಇರುವುದಿಲ್ಲ. ಆದರೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಹಾಗೆ ಇದು ಪಶು ಸಂಗೋಪನೆಯ ಬಗ್ಗೆ ಮಾಡಿರತಕ್ಕ ಒಂದು ಕಾನೂನುಅಲ್ಲ. ಇದು ಪಶುಪಾಲಕರ ಬಗ್ಗೆ ಮಾಡಿರತಕ್ಕ ಒಂದು ಕಾನೂನು. ಆದರೆ ಸಾಮಾನ್ಯವಾಗಿ ದನಗಳ ಕೊಟ್ಟಿಗೆ ಹತ್ತಿರಬೇಕು ಎಂಬ ವಿಚಾರ ಎಲ್ಲರಿಗೂ ಗೊತ್ತಿರತಕ್ಕದ್ದೇ. ಆದರೆ ನಮ್ಮ ಅನುಭವದಲ್ಲಿ ಸಾಮಾನ್ಯವಾಗಿ ಅನೇಕ ಪಟ್ಟಣಗಳಲ್ಲಿರತಕ್ಕ ರಾಸುಗಳು ದಿನಪೂರ್ತಿ ಪುಟ್‌ಪಾತಿನ ಮೇಲೋ, ಕನ್‌ಸರ್ವೆನ್ಸಿಯಲ್ಲೋ ಕಾಲ ಕಳೆಯಬೇಕಾಗಿದೆ. ಕಾರಣ ಅವುಗಳಿಗೆ ನಾಕಷ್ಟು ಜಾಗವಿಲ್ಲ; ಎಲ್ಲಿ ಹಾಲು ಮಾರಾಟ ಮಾಡತಕ್ಕವರು ಇರುತ್ತಾರೋ ಅಲ್ಲಿ ಹಾಲನ್ನು ಕೊಳ್ಳತಕ್ಕವರೂ ಕೂಡ ಇರಲೇಬೇಕು. ಹಾಲು ಕೊಳ್ಳತಕ್ಕ ಜನಗಳು ಇರುವ ಕಡೆ ಹಾಲು ಮಾರಟಮಾಡತಕ್ಕ ಜನರು ಇಲ್ಲದೆ ಇರುವುದರಿಂದ ಕೊಳ್ಳತಕ್ಕವರು ದೂರ ಹೋಗಿ ಹಾಲನ್ನು ತರಬೇಕಾದ ಸಂದರ್ಭವೂ ಇದೆ. ನಾವು ಈಗ ಇಲ್ಲಿ ಶಂಡಿಗಾಕ್ಕದ್ದು ಒಂದು ಎನೇಬ್ಲಿಂಗ್ ಕ್ಲಾಜ್ ಮಾತ್ರ. ಇದನ್ನು ನಗರದಲ್ಲಿ ಇಂದು ಕೆಲವು ಕಡೆಗಳಲ್ಲಿ ಉಂಟಾಗಿರತಕ್ಕ ಕೊಂದರೆಯನ್ನು ತಪ್ಪಿಸಲು ಇದನ್ನು ತರಲಾಗಿದೆ.

ಇನ್ನು ಲೈಸೆನ್ಸ್‌ನಲ್ಲಿ ಎರಡು ತರಹ ಇದೆ. ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕಟ್ಟುಪಾಲನೆ ಮಾಡಕೂಡದು ಎಂದು ಪ್ರೊಹಿಬಿಟೆಡ್ ಏರಿಯದಲ್ಲಿರತಕ್ಕವರು ಒಂದು ತರಗತಿಗೆ ಸೇರುತ್ತಾರೆ. ಇವರು ಒಂದು ತರಹಾ ಲೈಸೆನ್ಸ್‌ನ್ನು ಪಡೆಯಬೇಕು. ಇನ್ನೊಂದು ತರಹಾ ಜನಗಳೆಂದರೆ ತಮ್ಮ ಸ್ವಂತಕ್ಕಾಗಿ ಹಾಲನ್ನು ಬಳಸಲು ಹಸುಗಳನ್ನು ಕಟ್ಟತಕ್ಕವರು. ಇವರು ತಮ್ಮ ಸ್ವಂತಕ್ಕೆ ಬೇಕಾಗುವಷ್ಟನ್ನು ಇಟ್ಟುಕೊಂಡು ನಂತರ ಉಳಿದ ಹಾಲನ್ನು ಮಾರಾಟ ಮಾಡ ಬಹುದು. ಅಂದರೆ ಇದು ಆರು ಲೀಟರುಗಳಿಗಿಂತ ಜಾಸ್ತಿ ಇರಬಾರದು. ಹೀಗೆ ಹಸುಗಳನ್ನು ಸಾಕತಕ್ಕವರಲ್ಲಿ ಎರಡು ಭಾಗಇದೆ. ಎಂದರೆ ಅವರ ಸ್ವಂತ ಉಪಯೋಗಕ್ಕಾಗಿ ಈ ಹಾಲನ್ನು ಇಟ್ಟುಕೊಳ್ಳಬಹುದು. ಸ್ವಂತಕ್ಕೆ ಇಟ್ಟುಕೊಂಡು ಉಳಿದಂತಹ ಹಾಲನ್ನು ಅವರು ಮಾರುವುದಕ್ಕೂ ಅವಕಾಶವಿಶದೆ. ಈ ಬಗ್ಗೆ ಲೈಸನ್ಸನ್ನು ತೆಗೆದುಕೊಳ್ಳುವಾಗ ಎರಡು ತಂಹದ ಲೈಸೆನ್ಸ್ 'ಎ' ಮತ್ತು 'ಬಿ' ಎಂದು ಇದರಲ್ಲಿಡಲಾಗಿದೆ. ಮತ್ತು ಇವುಗಳನ್ನು ಯಾವ ನಂದರ್ಭದಲ್ಲಿ ಕೊಡಬೇಕೆನ್ನುವುದಕ್ಕೆ ವಿವರಣೆಗಳನ್ನೂ ಕೊಡಲಾಗಿದೆ.

ಇನ್ನೊಂದು ವಿಚಾರ ಎಂದರೆ ಇದರಿಂದ ವ್ಯವಸಾಯಗಾರರಿಗೆ ಬಹಳ ಕೊಂದರೆಯಾಗು ತ್ತದೆ ಎಂದು ಹೇಳಿದರು ಮತ್ತು ವ್ಯವಸಾಯಗಾರರ ವಿಚಾರದಲ್ಲಿ ಸ್ವಲ್ಪ ಸಂಶಯವನ್ನೂ ವ್ಯಕ್ತ ಪಡಿಸಿದರು. ನಾನಾದರೂ ಹೇಳುತ್ತೇನೆ ಇಂತಹ ಅನುಮಾನಕ್ಕೆ ಇದರಲ್ಲಿ ಅವಕಾಶವೇ ಇಲ್ಲ. ಬಹುತೇಕ ಇದು ಅರ್ಬನ್ ಏರಿಯಾಕ್ಕೆ ಮಾತ್ರ ಅನ್ವಯವಾಗುತ್ತದೆ ಎನ್ನುವ ಮಾತನ್ನೂ ಇದರಲ್ಲಿ ಹೇಳಲಾಗಿದೆ. ಇನ್ನೊಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅಡಳಿತ ಸುಸೂತ್ರವಾಗಿ ನಡೆಯ ಬೇಕಾದರೆ ಅದಕ್ಕೆ ಬರುವ ಅಡ್ಡಿ ಆತಂಕಗಳನ್ನು ತಪ್ಪಿಸಿ ಅದನ್ನು ವ್ಯವಸ್ಥೆಗೊಳಿಸಬೇಕಾದುದು ಅಗತ್ಯ. ಅದಕ್ಕಾಗಿ ಈ ಕಾನೂನನ್ನು ತಂದು ವ್ಯವಸ್ಥೆಗೊಳಿಸುತ್ತಿದ್ದೇವೆ. ಅಲ್ಲದೆ ಯಾರೇ ಆದರೂ ತಮ್ಮ ಮನೆಯ ಬಳಕೆಗಾಗಿ ಬೇಕಾದಷ್ಟು ಹಾಲನ್ನು ಮನೆಯ ಉಪಯೋಗಕ್ಕೊಸ್ಕರ ಇಟ್ಟು ಕೊಳ್ಳಲು ಅವರ ಮೇಲೆ ಯಾವ ನಿರ್ಬಂಧಗಳೂ ಇರುವುದಿಲ್ಲ. ಇನ್ನೊಂದು ಆಕ್ಷೇಪಣೆ ಮಾಡಿದರು. ಪೂರ್ತಿ ಹೊಸದಾಗಿ ಬರುತ್ತಿರುವ ಕಾನೂನುಗಳನ್ನು ಅದಷ್ಟು ಕಡಿಮೆ ಮಾಡಬೇಕು ಎಂದು. ನಾನು ಕಾನೂನುಗಳು ಕಡಿಮೆ ಇರಬೇಕು ಎಂದು ಹೇಳಿದರೂ ನಾವು ಜನರಿಗೆ ಎಲ್ಲ ಹಕ್ಕು ಬಾಧ್ಯತೆಗಳನ್ನು ಕೊಟ್ಟ ಅದಮೇಲೆ ಅವರ ಹಕ್ಕನ್ನು ಯಾವ ರೀತಿಯಲ್ಲಾದರೂ ಒಂದು ವ್ಯವಸ್ಥೆ ಮಾಡಬೇಕಾದರೆ ಅದಕ್ಕೆ ತಕ್ಕ ಒಂದು ಕಾನೂನು ಇಲ್ಲದೆ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿರುವಂತೆ ಲೈಸನ್ಸಿಂಗು ಅಥಾರಿ ಟಿಎನ್ನುವ ಅಧಿಕಾರಿಗಳಿಗೆ ಸರಕಾರ ನರಿಯಾದ ಅಧಿಕಾರ ಕೊಡಬೇಕಾದರೆ ಮತ್ತು ಅದನ್ನು ನಡೆಸುವುದಕ್ಕೆ ಮತ್ತು ವ್ಯವಸ್ಥೆ ಮಾಡುವುದಕ್ಕೆ ಕಾನೂನು ಇಲ್ಲದೆ ಮಾಡುವುದು ಸಾಧ್ಯವಿಲ್ಲ. ಅನಿವಾರ್ಯವಾಗಿ ಕಾನೂನು ಬೇಕಾಗುತ್ತದೆ. ಇನ್ನೊಂದು ಆಕ್ಷೇಪಣೆ ಮಾಡಿದರು. ಅದು ಏಷ್ಟೋ ಕಾನೂನುಗಳನ್ನು ಮಾಡಿದರೂ ಅವುಗಳೊಂದು ನರಿಯಾಗಿ ಉಪಯೋಗವಾಗದೆ ಮೂಲೆಗೆ ಹೋಗುತ್ತಿವೆ ಎಂದು. ಈಗಾಗಲೆ ತಮಗೆ ತಿಳಿದಂತೆ ಈ ಸಭೆಯಲ್ಲಿ ಎಷ್ಟೊಂದು ಕಾನೂನುಗಳಾಗಿವೆ ಎನ್ನುವುದು ತಮಗೇ ತಿಳಿದೇ ಇದೆ. ಈ ಸಭೆಯು ಮೇಲೆ ಎಷ್ಟೊಂದು ಭಾರ ಬಿದ್ದಿದೆ ಎನ್ನುವುದೂ ತಮಗೇ ತಿಳಿದಿದೆ.ಪ್ರತಿ ವರ್ಷವೂ ಮೂರು ನಾಲ್ಕು ತಿಂಗಳುಗಳ ಕಾಲ ಈ ಸಭೆಯನ್ನು ನಡೆಸುತ್ತಿದ್ದರೂ ಇನ್ನೂ ಎಷ್ಟೋ ಕಾನೂನುಗಳನ್ನು ಏಕರೂಪವಾಗಿ ಮಾಡುವುದಕ್ಕಾಗಲಿಲ್ಲ.

ಈ ಕಾನೂನಿನಂತೆ ಯಾವ ಯಾವ ರೂಲ್ಸುಗಳನ್ನು ಮಾಡಿದರೂ ಕೂಡ ಅಂತಹ ನಿಯಮ ಗಳನ್ನೆಲ್ಲಾ ಈ ಸಭೆಯ ಮುಂದೆ ಮಂಡಿಸಲೇ ಬೇಕು. ಹಾಗಿರುವಾಗ ಇದನ್ನು ಸಬಾರ್ಡಿನೇಟು ಲೆಜಿಸ್ಲೇಷನ್ನು ಕಮಿಟಿಯ ಮುಂದೆ ತರುವುದು ಅಗತ್ಯ ಎಂದು ಹೇಳಿದರು. ಕಾನೂನು ಪ್ರಕಾರ ಯಾವ ಯಾವ ನಿಯಮಗಳನ್ನು ಮಾಡುತ್ತೇವೋ ಅಂತಹ ನಿಯಮಗಳೆಲ್ಲಾ ಈ ಸಭೆಯ ಮುಂದೆ ಬರುತ್ತದೆ ಮತ್ತು ಅನಂತರ ಅದು ಸರಿಯಾಗಿಲ್ಲ ಎನ್ನುವಂತಾಗಿದ್ದರೆ ಅದು ಸಬಾರ್ಡಿನೇಟು ಲೆಜಿಸ್ಲೇಷನ್ನು ಕಮಿಟಿಮುಂದೆಯೂ ಹೋಗುತ್ತದೆ. ಅದರ ಮೇಲೆ ಒಂದು ಹತೋಟಿ ಇದ್ದೇ ಇದೆ. ಸರಕಾರ ನರಿಯಾದ ಅಧಿಕಾರವನ್ನು ಪಡೆಯಬೇಕಾದರೆ ಅದಕ್ಕೆ ನರಿಯಾದ ಕಾನೂನು ಇರಲೇ ಬೇಕಾಗುತ್ತದೆ. ಅಂತಹ ಕಾನೂನಿನ ವ್ಯಾಪ್ತಿಯೊಳಗೇ ನಿಯಮಗಳನ್ನು ಮಾಡಿ ಅದನ್ನು ಈ ಸಭೆಯ ಮುಂದೆ ಇಟ್ಟು ಒಪ್ಪಿಗೆಯನ್ನು ಪಡೆದು ಅದನ್ನು ಉಪಯೋಗಿಸಬೇಕು ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಅದುದರಿಂದ ಈ ಕಾನೂನನ್ನು ವಾಪಸ್ಸು ಪಡೆಯಬೇಕು ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಈಗ ತಂರಿರುವ ಮಸೂದೆಯನ್ನು ಈ ಸಭೆಯವರು ಒಪ್ಪಿ ಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The question is:

"That the Cattle Licencing Bill, 1963, be taken into consideration."

The motion was adopted.

Mr. SPEAKER.—Clause 2. There is an Amendment tabled by Sri C. R. Range Gowda.

Sri C. R. RANGE GOWDA (Magadi).—Sir, I beg to move:

"That in item (b), line 2 of clause 2, after the word "buffaloes" the following words shall be added:

"asses, pigs, sheep, goats and such other animals that may be prescribed."

Mr. SPEAKER.—Amendment moved:

"That in clause 2, in item (b), line 2, after the word "buffaloes" the following words shall be added:

"asses, pigs, sheep, goats and such other domestic animals that may be prescribed."

† ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮೀ, ಇದರಲ್ಲಿ ಸ್ಪೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ಗಳಲ್ಲಿ construction to the Traffic and insanitary conditions ಗಾಗಿ ಎಂದು ಹೇಳುತ್ತ, ಇಲ್ಲಿರುವ ಕ್ಲಾಜು (2) (ಬಿ)ನಲ್ಲಿ ಬರೀ ಎಮ್ಮೆಗಳನ್ನು ಮಾತ್ರ ಸೂಚನರಾಗಿದೆ. ಇದರ ಜೊತೆಗೆ ಕತ್ತೆಗಳು, ಹಂದಿಗಳು, ಕುರಿಗಳು, ಮೇಕೆ ಇತ್ಯಾದಿಗಳನ್ನೂ ಸೇರಿಸಬೇಕೆಂದು ನನ್ನ ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ಭಾವಿಸುತ್ತೇನೆ.

† ಶ್ರೀ ಗಂಗಾಧರ ನಾಪೋಷಿ (ಗುಲ್ಬರ್ಗಾ).—ಸ್ವಾಮಿ, ನಮ್ಮ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಹಂದಿಗಳ ಹಾವಳಿ ಬಹಳ ಜಾಸ್ತಿಯಾಗಿವೆ, ಇದರಲ್ಲಿ ಹೈದರಾಬಾದು ಮುನಿಸಿಪಾಲಿಟಿಗಳಿಗೆ ಈ ಅಧಿಕಾರ ಇರುವಂತೆ ಮಾಡಲು ಮತ್ತು ಹಂದಿಗಳ ಹಾವಳಿ ತಪ್ಪಿಸಲು ಇದರಲ್ಲಿ ಸೇರಿಸುವುದು ಉತ್ತಮ ಎಂದು ನನಗೂ ಕಾಣುತ್ತದೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಆದರಿಂದ ಈ ಕಲಮಿನಲ್ಲಿ ಹಂದಿಗಳನ್ನೂ ಸೇರಿಸಬೇಕೆಂದು ನಲಹ ಮಾಡುತ್ತೇನೆ.

† ಶ್ರೀ ಕೆ. ಪಟ್ಟಸ್ವಾಮಿ.—ಸ್ವಾಮಿ, ಈ ತಿದ್ದುಪಡಿಯಂತೆ ಹೆಚ್ಚಿನ ಅಧಿಕಾರ ಕೊಡುವಂತೆ ಮಾಡಿದಂತಾಗುತ್ತದೆ, ನಮ್ಮಲ್ಲಿ ಇಷ್ಟು ಭಾರ ಹೊರುವುದು ಸಾಧ್ಯವಿಲ್ಲ ಎಂದು ನಾನು ಭಾವಿಸುತ್ತೇನೆ. ಆದರಿಂದ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳಲು ವಿಷಾದಿಸುತ್ತೇನೆ. ಶ್ರೀಮತಿ ನಾಪೋಷಿಯವರು ಹಂದಿಯ ಬಗ್ಗೆ ಹೇಳಿದರು. ರಾಯಚೂರಿನಲ್ಲಿ ನಾನು ಒಂದು ಸಾರಿ ಹೋಗಿದ್ದಾಗ ನನ್ನ ಸ್ನೇಹಿತರೊಬ್ಬರು ಹೇಳಿದರು ಈ ರಾಯಚೂರು ಪಟ್ಟಣವಲ್ಲಿ ಹಂದಿಗಳು ಇಲ್ಲದೇ ಇದ್ದರೆ ಈ ನಗರದ ಸೌಂದರ್ಯ ಹಾಳಾಗುತ್ತಿತ್ತು ಮತ್ತು ಇದರಿಂದ ಅಷ್ಟು ತೊಂದರೆ ಇಲ್ಲ ಎಂದರು. ಇದು ಇಲ್ಲಿರುವ ವಾಸ್ತವದ ಸ್ಥಿತಿ.. ಆದುದರಿಂದ ಈ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ.

Mr. SPEAKER.—The question is:

"That in clause 2 item (b) line 2, after the word "buffaloes" the following words shall be added:

"asses, pigs, sheep, goats and such other domestic animals that may be prescribed."

The amendment was negatived.

Mr. SPEAKER.—I will put the clause to the vote. The question is:

"That clause 2 stand part of the bill."

The motion was adopted.

Clause 2 was added to the Bill.

MR. SPEAKER.—Clauses 3 and 4. There is no amendment. I shall put them to vote. The question is :

"That clauses 3 and 4 stand part of the Bill."

The motion was adopted.

Clauses 3 and 4 were added to the Bill.

CLAUSE 5.

SRI C. R. RANGE GOWDA.—Sir, I beg to move :

"That after sub-clause (5), the following sub-clause shall be added:

"(6) In the case of cattle used entirely for the purpose of agricultural operation, they should be exempted from levying any fee."

MR. SPEAKER.—Amendment moved:

"That after sub-clause (5), the following sub-clause shall be added:

"(6) In the case of cattle used entirely for the purpose of agricultural operation, they should be exempted from levying any fee."

SRI K. PUTTASWAMY.—Sir, I have already given an assurance that when this Bill becomes law, we are not going to apply to agricultural areas and towns. Therefore, this question would not arise. Therefore it is not possible to accept this amendment.

SRI C. R. RANGE GOWDA.—I will withdraw the amendment, Sir.

The amendment was, by leave of the House, withdrawn.

MR. SPEAKER.—I will put clauses 5, 6 and 7. The question is :

"That clauses 5 to 7 both inclusive stand part of the Bill.

The motion was adopted.

Clauses 5, 6 and 7 were added to the Bill.

CLAUSE 8.

SRI C. R. RANGE GOWDA.—Sir I beg to move :

"That after sub-clause (1), the following proviso shall be added :

"Provided that in such a case, if the owner desires a suitable building be constructed for his cattle in a non-prohibited area at Government cost and given to him at a nominal rent."

Mr. SPEAKER.—Amendment moved:

"That after sub-clause (1), the following proviso shall be added :

"Provided that in such a case, if the owner desires a suitable building be constructed for his cattle in a non-prohibited area at Government cost and given to him at a nominal rent."

5-00 P.M.

† ಶ್ರೀ ಸಿ. ಆರ್. ರಂಗೇಗೌಡ.—ಮುನಿಸಿಪಾಲಿಟಿಯವರು ಯಾವ ಏರಿಯಾವನ್ನಾದರೂ ಪ್ರೊಹಿಬಿಟೆಡ್ ಏರಿಯವಾಗಿ ಡಿಕ್ಲೇರ್ ಮಾಡಬಹುದು. ಈಗ ಗುಂಡೊಪಂತ್ ಬೀದಿ, ಅಥವ ಕಿಲಾರಿರೋಡನ್ನು ಅಕಸ್ಮಾತ್ತಾಗಿ ಪ್ರೊಹಿಬಿಟೆಡ್ ಏರಿಯವಾಗಿ ಮಾಡಿದರೆ ಬಹಳ ಕಷ್ಟವಾಗುತ್ತದೆ. ಆ ಏರಿಯಾದಲ್ಲಿ ಎಷ್ಟೋಜನ ಅಧಿಕಾರಿಗಳು, ಖಾನಗಿ ಜನಗಳು ಕೂಡ, ಒಂದೆರಡು ಹಸುಗಳನ್ನು ಇಟ್ಟುಕೊಂಡು, ಅದನ್ನು ಉಪಕಸುಬನ್ನಾಗಿಟ್ಟುಕೊಂಡು, ಅದರಿಂದ ಬರುವ ಹಾಲಿನ ಉತ್ಪತ್ತಿಯಿಂದ ತಮ್ಮ ಜೀವನವನ್ನು ನಾಗಿಸುತ್ತಿದ್ದಾರೆ. ನೀವು ಪ್ರೊಹಿಬಿಟೆಡ್ ಏರಿಯವಾಗಿ ಡಿಕ್ಲೇರ್ ಮಾಡುವುದರಲ್ಲಿ ನನ್ನ ಅಭ್ಯಂತರವಿಲ್ಲ. ಆದರೆ ಶ್ರೀ ಗೋಪಾಲಗೌಡರು ಹೇಳಿದಹಾಗೆ ಬೇರೆ ಕಡೆ ಎಲ್ಲಾದರೂ ಒಂದು ಷೀರಕ್ಷೇತ್ರ ಮಾಡಿ ಸೌಕರ್ಯ ಮಾಡಿಕೊಟ್ಟರೆ, ಯಾರು ಹಸುಗಳನ್ನು ಇಟ್ಟುಕೊಂಡಿದ್ದರೂ ಅವರು ಆ ಬಿಲ್ಡಿಂಗ್‌ನ್ನು ನಾಮಿನಲ್ ರೆಂಟಿಗ್ ತೆಗೆದುಕೊಂಡು ಅಕಾಡೆಮಿಶ್ಯನ್ ಹೊಂದಬಹುದು. ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು.

† ಶ್ರೀ ಕೆ. ಪುಟ್ಟಸ್ವಾಮಿ.—ಓಪ್ಪುವುದು ಸ್ವಲ್ಪ ಕಷ್ಟ. ಆದರೆ ಇವರು ಹೇಳುತ್ತಿರುವುದರಲ್ಲಿ ಬಹಳ ಒಳ್ಳೆಯದಿದೆ. ಸರಕಾರದವರು ಇವರಿಗೆ ಬೇಕಾದಂಥ ನಿವೇಶವನ್ನೂ ವಾತಾವರಣವನ್ನೂ ಕಲ್ಪನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಶ್ರೀ ರಂಗೇಗೌಡರು ಇದನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

Sri C. R. RANGE GOWDA.—In view of the assurance given, I propose to withdraw my amendment.

The amendment was, By leave of the house, withdrawn

Mr. SPEAKER.—There is one more amendment. Sri Kesavamurthi has given amendments late. There is no time to circulate it. I will permit it to be moved.

The House will now adjourn to meet again at 5-30 P.M.

The House adjourned at Five Minutes past Five of the Clock and reassembled at Fifty Minutes past Five of the Clock.

[MR. SPEAKER in the Chair.]

CLAUSE 8

Sri H. R. KESHAVA MURTHY.—Sir, I beg to move :

"That in clause 9 (2) for the words 'six months' the words 'one year' be substituted.

Mr. SPEAKER.—Amendment moved :

"That in clause 8 (2) for the words 'six months' the words 'one year' be substituted.

† ಶ್ರೀ ಎಚ್. ಆರ್. ಕೇಶವಮೂರ್ತಿ.—ಈ 6 ತಿಂಗಳ ಅವಧಿ ಪೂರಾ ಕಡಿಮೆ ಆಯಿತು. ಪ್ರೊಹಿಬಿಟೆಡ್ ಏರಿಯಾದಲ್ಲಿ ಕ್ಯಾಟಲನ್ನು ಪಿಲ್ಲೇವಾರಿ ಮಾಡಲು, ಇಲ್ಲವೇ ಅವರು ಬೇರೆ ಒಂದು ಜಾಗವನ್ನು ಗೊತ್ತುಮಾಡಿಕೊಳ್ಳಲು ಈ 6 ತಿಂಗಳ ಅವಧಿ ಪೂರಾ ಕಡಮೆ. ಇದನ್ನು ಒಂದು ವರ್ಷಕ್ಕೆ ಹೆಚ್ಚಿಸಬೇಕೆಂದು ಈ ತಿದ್ದುಪಡಿಯನ್ನು ಸೂಚಿಸುತ್ತೇನೆ.

Sri K. PUTTASWAMY.—I do not accept it, Sir.

Mr. SPEAKER.—I will put the amendment to the Vote of the House. The question is:

"That in clause 8 (2) for the words 'six months' the words 'one year' be substituted.

The amendment was negatived.

Mr. SPEAKER.—I will now put the clause. The question is:

"That clause (8) stand part of the Bill."

The motion was adopted.

Clause (8) was added to the Bill.

Mr. SPEAKER.—There is no amendment to clause 9. The question is:

"That clause 9 stand part of the Bill."

The motion was adopted.

Clause 9 was added to the Bill.

Clause 10

Sri H. R. KESHAVA MURTHY.—Sir, I beg to move:

"That in clause 10 (1) item (2) for the words 'six litres' the words '12 litres' be substituted."

Mr. SPEAKER.—Amendment moved:

"That in clause 10 (1) item (2) for the words 'six litres' the words '12 litres' be substituted."

† ಶ್ರೀ ಎಚ್. ಆರ್. ಕೇಶವ ಮೂರ್ತಿ.—ಇಲ್ಲಿ 6 ಲೀಟರೆಂದು ಹೇಳಿರತಕ್ಕದ್ದು ಬಹಳ ಕಡಮೆ. ಇದನ್ನು 12 ಲೀಟರಿಗೆ ಹೆಚ್ಚಿಸಬೇಕೆಂದು ಹೇಳುತ್ತೇನೆ. 6 ಲೀಟರ್ಸನ್ನು ಮೂರುಭಾಗ ಮಾಡ ಬಹುದು. ಈ ಎರಡು ಲೀಟರ್ಸನ್ನು ಮಾರಾಟ ಮಾಡಬೇಕೆಂದರೆ ಬಹಳ ತೊಂದರೆ ಆಗುತ್ತದೆ. ಆದುದರಿಂದ ಇದನ್ನು ಕನಿಷ್ಟಪಕ್ಷ 12 ಲೀಟರ್ಸಿಗೆ ಏರಿಸಬೇಕೆಂದು ಹೇಳುತ್ತೇನೆ.

† ಶ್ರೀ ಕೆ. ಪುಟ್ಟಸ್ವಾಮಿ.—ಗೌಳಿಗನ ಮಕ್ಕಳಿಗೆ ಹಾಲಲ್ಲ ಎಂಬ ಗಾದೆ ಇದೆ, ಸ್ವಂತಕ್ಕೆ ಆಕಳನ್ನು ಸಾಕತಕ್ಕವರು ಹೆಚ್ಚು ಹಾಲನ್ನು ಕುಡಿಯಲಿ ಎಂದು ನಾವು ಹೇಗೆ ಹೇಳಿದ್ದೇವೆ. ನಮ್ಮ ಥಳಿಗಳೆಲ್ಲಾ ಉತ್ತಮವಾಗಲಿ ಆಗಬೇಕಾದರೆ ನಾವೇ ಒಂದು ತಿದ್ದುಪಡಿ ತಂದು ಅದನ್ನು ಬದಲಾವಣೆ ಮಾಡುತ್ತೇವೆ. ಆದರೆ ಸದ್ಯಕ್ಕೆ ಇಷ್ಟೇ ಸಾಕು ಎಂದು ಹೇಳುತ್ತೇನೆ; ಈ ತಿದ್ದುಪಡಿಯನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

Mr. SPEAKER.—I will put the amendment. The question is:

"That in clause 10 (1) item (2) for the words 'six litres' the words '12 litres' be substituted."

The amendment was negatived.

Mr. SPEAKER.—The question is:

"That clause 10 stand part of the Bill."

The motion was adopted.

Clause 10 was added to the Bill.

CLAUSE 11

Sri H. R. KESHAVA MURTHY.—I beg to move:

"That in clause 11 sub-clause (f) between the words "any" and "matter" the words "other" shall be substituted."

Mr. SPEAKER.—Amendment moved:

"That in clause 11 sub-clause (f) between the words "any" and "matter", the words "other" shall be substituted."

Sri K. PUTTASWAMY.—It is not going to make any material difference. These words will be superfluous.

Mr. SPEAKER.—The question is:

"That in clause 11 sub-clause (f) between the words "any" and "matter" the words "other" shall be substituted."

The amendment was negatived.

r. SPEAKER.—The question is:

"That clause 11 stand part of the Bill."

The motion was adopted.

Clause 11 was added to the Bill.

Mr. SPEAKER.—The question is:

"That clauses 12, 13 and 14 stand part of the Bill."

The motion was adopted.

Clauses 12, 13 and 14 were added to the Bill.

Preamble

Mr. SPEAKER.—There is an amendment in the name of Sri C. R. Range Gowda. Generally amendments are not moved to the preamble because it is not a very material portion of the Bill. Anyway, he may move the amendment.

Sri C. R. RANGE GOWDA.—Sir, I beg to move:

"That in line 1, after the words "interest of" and before the words "public Health" the words "prevention of accidents," shall be inserted."

Mr. SPEAKER.—Amendment moved:

"That in the Preamble in line 1, after the words "interest of" and before the words "public Health" the words "prevention of accidents" shall be inserted."

† ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ನಮ್ಮ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಿ ಒಂದು ವಿಚಾರವನ್ನು ಕೈಬಿಟ್ಟಿದ್ದಾರೆ. ಇಲ್ಲಿ ಅಕ್ಸಿಡೆಂಟುಗಳನ್ನು ತಡೆಗಟ್ಟಲು ಒಂದು ಕ್ಲಾಜನ್ನು ಸೇರಿಸಬೇಕಾಗಿತ್ತು ಎಂದು ನನ್ನ ತಿದ್ದುಪಡಿ ಇದೆ.

6-00 P.M.

ಸ್ವಾಮಿ, ನಾನು ತಿದ್ದುಪಡಿ ತಂದಿರುವುದರ ಉದ್ದೇಶ ಈಗ ಬೆಂಗಳೂರು ನಗರದಲ್ಲಿ ವಾಹನಗಳು ಹೋಗುವಾಗ ದನಕರುಗಳಿಂದ ಎಷ್ಟೋ ಅಡ್ಡಿ ಆತಂಕಗಳಾಗುತ್ತಿರುತ್ತವೆ. ಇದರಿಂದ ಓಡಾಟಕ್ಕೂ ತೊಂದರೆಯಾಗುತ್ತದೆ. ಪ್ರತಿಯೊಬ್ಬರಿಗೂ ಇದು ತಿಳಿದ ವಿಚಾರವಾಗಿರುವುದರಿಂದ ಪಬ್ಲಿಕ್ ಹೆಲ್ತ್ ಸ್ಯಾನಿಟೇಷನ್ನಿನಂತೆ ಅಕ್ಸಿಡೆಂಟುಗಳನ್ನು ತಪ್ಪಿಸುವುದೂ ಬಹು ಮುಖ್ಯವಾದುದು. ಆದರಿಂದ ನನ್ನ ತಿದ್ದುಪಡಿಯಲ್ಲಿ Prevention of Accidents ಎನ್ನುವ ಪದಗಳನ್ನು ಸೇರಿಸಬೇಕೆಂದು ಸಲಹೆ ಮಾಡುತ್ತೇನೆ.

† Sri K. PUTTASWAMY.—I cannot accept this amendment. All matters relating to traffic are controlled by the Police Act. Therefore, it would not be proper to include it.

Mr. SPEAKER.—The question is :

"That in the preamble, in line 1, after the words "interest of" and before the words "public Health" the words prevention of accidents, "shall be inserted."

The amendment was negatived.

Mr. SPEAKER.—The question is :

"That clause, the Title and the Preamble stand part of the Bill."

The motion was adopted.

Clause 1, the Title and the Preamble were added to the Bill.

Motion to pass.

Sri K. PUTTASWAMY.—I move :

"That the Myoore Cattle Licensing Bill, 1963, be passed."

Mr. SPEAKER.—The question is :

"That the Mysore Cattle Licensing Bill, 1963, be passed."

The motion was adopted.

Mr. SPEAKER.—The Next Bill.

Sri M. V. RAMA RAO (Minister for Law).—Shall I move the Bill or will the Bill be taken up to-morrow ?

HON'BLE MEMBERS.—We shall take it up to-morrow.

Mr. SPEAKER.—All right. The House stands adjourned to re-assemble to-morrow at 1 P.M.

The House adjourned at Five Minutes past Six of the Clock to meet again at One of the Clock on Wednesday, the 11th December 1963.

WD 1804—GPB—900—31-1-1964

MYSORE LEGISLATIVE ASSEMBLY

EIGHTY-SECOND DAY.

Wednesday, 11th December 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given.)

Lands leased out for the Excavation of Manganese, Iron and other ores in Chiknaikanahalli Taluk.

*Q.—612. SRI C. H. LINGADEVARU (Chiknaikanahalli).—

Will the Government be plased to state :—

(*a*) the number of persons who have been given lands on lease basis for the excavation of manganese, iron and other ores in Chiknaikanahalli Taluk ;

(*b*) the extent of land leased out to each person ;

(*c*) the quantity of ore excavated for the last three years by each person ;

(*d*) the royalty collected from them ;

(*e*) whether local cess is being imposed on the ore excavated by the lessees and if so, the amount collected thereon ;

(*f*) whether the local cess so collected has been credited to the account of the concerned Local Board ?

A.—SRI K. MALLAPPA (Minister for Industries and Commerce).—

(*a*) 18.

(*b*) As in column (3) of appended statement.

(*c*) As in column (4) of appended statement.

(*d*) As in column (5) of appended statement.

(*e*) Local cess is collected on the surface rent paid by the lessees. The amount collected is as in column (6) of appended statement.

(*f*) No.